

ಗಿಲಿಗಿಲಿ ಸುಬ್ಬಕ್ಕಾ...
ಸುಡುಗಾಡು ಸಿದ್ಧರು.
ಗ್ರಾಮೀಣ ಜನರಿಗೆ
ಅಪರೂಪದ ಔಷಧಿ,
ಬೇರು ನಾರು
ಒದಗಿಸುತ್ತಿದ್ದ ಇಂದ್ರಜಾಲ
ಪ್ರದರ್ಶಿಸುತ್ತಿದ್ದ
ಸುಡುಗಾಡು ಸಿದ್ಧರು
ಛಿದ್ರವಾದ ಗ್ರಾಮ್ಯಭಿತ್ತಿಯ
ವಿದಳನ ಕಣಗಳು. ಇವರ
ಬದುಕೀಗ
ಕೃಷಿಕರಂತೆಯೇ ಅತಂತ್ರ.

# ಕಳೆದು ಹೋಗುತ್ತಿರುವ ಗ್ರಾಮ್ಯಭಿತ್ತಿಗಳು

ಚಿತ್ರ-ಬರಹ:
ಸಂಜಯ್ ಭಟ್ ಬೆಣ್ಣೆ



ಅನ್ನ ಬೆಳೆದವರೇ
ನಗರದತ್ತ ಮುಖ
ಮಾಡಿರುವಾಗ ಇಂತಹ
ಭತ್ತದ ಬಣವೆಗಳಿನ್ನೆಲ್ಲಿ
ಉಳಿದಾವು? ಇನ್ನಿದು
ಅಪರೂಪದ ಚಿತ್ರ.

ವಿಳಾಸ
ರಾಮಚಂದ್ರ ಹೆಗಡೆ ಸಿ.ಎಸ್, "ನೆನಪು" ನಂ.33,(172/3), ೩ನೇ 'ಸಿ' ಅಡ್ಡರಸ್ತೆ,
ಕತ್ರಿಗುಪ್ಪಾ ಮುಖ್ಯರಸ್ತೆ, ವಿವೇಕಾನಂದನಗರ, ಬೆಂಗಳೂರು - 560 085 ದೂರವಾಣಿ : 9986372503
Email:contact@chaitrarashmi.com, Web:www.chaitrarashmi.com

Editor, Printer, Publisher and owned by RAMACHANDRA HEGDE C.S. , No.53, 2nd Floor, Shamsingh Complex, Gandhi Bazaar, Bangalore-560 004. Printed at : CHAITRA PRINTERS, 193, Link Road, Malleswaram, Bangalore- 560 003.

ಸೃಜನಶೀಲತೆಯ ಹುಡುಕಾಟದಲ್ಲಿ...
RNI KAR KAN/2006/19109
MAG (3)/NPP/272/2005-06

# ಚೈತ್ರರಶ್ಮಿ

ಕನ್ನಡ ಮಾಸಿಕ
ಜೂನ್, ಜುಲೈ – ೨೦೦೯

- A RAY OF HOPE



## ನೆಲ ಮೂಲ ಮರೆತ ನವ್ಯಪ್ರಜೆಗಳು ನಾವು?!

RNI KAR KAN/2006/19109
MAG (3)/NPP/272/2005-06

ಸೃಜನಶೀಲತೆಯ ಹುಡುಕಾಟದಲ್ಲಿ.....

CHAITRA RASHMI
Kannada Monthly

ಚೈತ್ರರಶ್ಮಿ - A RAY OF HOPE

EDITOR: RAMACHANDRA HEGDE.C.S.

ಸಂಪಾದಕ: ರಾಮಚಂದ್ರ ಹೆಗಡೆ. ಸಿ.ಎಸ್.

| | | | | |
|---|---|---|---|---|
| ಸಂಪುಟ: 5 | ಸಂಚಿಕೆ: 4 | ಜೂನ್, ಜುಲೈ - 2009 | ಪುಟ: 20 | ಬೆಲೆ: ರೂ. 5.00 |
| Volume: 5 | Issue: 4 | June, July - 2009 | Pages: 20 | Rs. 5.00 |


# ಸ್ವರ್ಣ ಮಿಲನದ ಸುವರ್ಣ ಕ್ಷಣಗಳು

**ಚೈತ್ರರಶ್ಮಿಯ** ಉತ್ತರಕನ್ನಡ ಬಳಗದ 'ಸ್ನೇಹಮಿಲನ' ಹಾಗೂ ಪತ್ರಿಕೆಯ 50ನೇ ಸಂಚಿಕೆಯ ಬಿಡುಗಡೆ ಕಾರ್ಯಕ್ರಮ ಮೇ 17ರ ಭಾನುವಾರ ಶಿರಸಿಯ ಟಿ.ಎಸ್.ಎಸ್. ಸಂಸ್ಥೆಯ ಶ್ರೀ ಅರವಿಂದ ಸಭಾಭವನದಲ್ಲಿ ಜರುಗಿತು. ಚೈತ್ರರಶ್ಮಿಯ ಪ್ರಪ್ರಥಮ ಸಂಚಿಕೆಯನ್ನು ಬಿಡುಗಡೆ ಮಾಡಿದ್ದ, ಶ್ರೀಯುತ ಮಹಾಬಲ ಭಟ್ಟರ ಹಸ್ತಗಳಿಂದ ಐವತ್ತನೇ ಸಂಚಿಕೆ ಕೂಡ ಲೋಕಾರ್ಪಿತವಾಯ್ತು. ಹಾಗೊಂದು ಸ್ವರ್ಣ ಸಂಭ್ರಮದ ಸಂಭವಕ್ಕೆ ತೆರೆದುಕೊಂಡ ಕ್ಷಣ ಅದು. ಇದೇ ವೇದಿಕೆಯಲ್ಲಿ, ಬಳಗದ ಕವಯಿತ್ರಿ ಶ್ರೀಮತಿ ಪ್ರಿಯಾ ಎಂ.ಭಟ್‌ರವರ ಕವನ ಸಂಕಲನ 'ಜೀವನ್ಮುಖಿ' ಕೂಡ ಲೋಕಾರ್ಪಿತವಾಯ್ತು. ಚೈತ್ರರಶ್ಮಿಯ ಪಾಲಿಗೆ ಇದೊಂದು ಸ್ವರ್ಣ ಕ್ಷಣ.







# ಕಾವ್ಯರಶ್ಮಿ

ಮೊನ್ನೆ ಪಕ್ಕದ ಮನೆಯ ಪದುಮಕ್ಕನ
ಹದಿಹರೆಯದ ಮಗಳು ಹರಿಣಾಕ್ಷಿ
ತಲೆತಿರುಗಿ ಕರ್ರನೆ ಕಾರಿಕೊಂಡಾಗ
ನೆರೆಹೊರೆಯ ಕಿಟಕಿ ಬಾಗಿಲುಗಳು
ಪಟಪಟನೆ ತೆರೆದು, ಕಾರಿದ ಸದ್ದಿಗೆ ವದಂತಿಯ
ಮೊಳಕೆ ರೆಕ್ಕೆಪುಕ್ಕಗಳೊಡನೆ ಥಟ್ಟನೆ ಚಿಗುರಿ,
ಆಗಸದೆತ್ತರಕೆ ಬೆಳೆದು
ಗರಿಗೆದರಿ ಗರುಡಹದ್ದುಗಳಾಗಿ
ಕುಕ್ಕಿಕುಕ್ಕಿ ತಿನ್ನತೊಡಗಿದಾಗ ಬೆದರಿದ
ಹರಿಣಾಕ್ಷಿ ಮನೆ ಎದುರಿನ
ಗೌರಿಕೆರೆಗೆ ಹಾರಿದವಳು ಮತ್ತೇಳಲಿಲ್ಲ.

ನಿನ್ನೆ ನೀರವತೆಯ ಇರುಳಲ್ಲಿ, ಆ ಗೌರಿಕೆರೆಯ
ಎದುರಲ್ಲಿ ಒಬ್ಬನೇ ಕುಳಿತು
ಕಣ್ಣೆವೆ ಮುಚ್ಚದೆ ಎದುರು ದೃಷ್ಟಿ
ಹಾಯಿಸಿದಾಗ, ಬಾನಂಗಳದಲ್ಲಿ ತುಂಬು
ತಂಗದಿರ ಚೆಲ್ಲಿದ್ದ ಹಾಲುಕೋಲನು ಹಿಡಿದು
ಜೋಕಾಲಿಯಾಡುತ್ತಾ ಮೈಮರೆತು ಜಾರಿ
ಧರೆಗಳಿದ ಆ
ಅಗಣಿತ ತಾರೆಗಳು ನೀರತೆರೆಗಳನು
ಅಲ್ಲೋಲಕಲ್ಲೋಲಗೊಳಿಸಿ
ನರ್ತಿಸುತ್ತ ನನ್ನನಣಕಿಸಿದವು.



## ನಾನು ನಾನಾಗಲಿಲ್ಲ



ನನ್ನಲ್ಲಿ ಧೀಮಂತಿಕೆಯಿದಿದ್ದರೆ,
ತುಸುವಾದರೂ ಛಲವಿದ್ದಿದ್ದರೆ
ವದಂತಿಗಳು ಕೊಬ್ಬಿ
ರಣಹದ್ದುಗಳಾಗುವ ಮೊದಲೇ
ಅವುಗಳ
ರೆಕ್ಕೆಪುಕ್ಕಗಳ ಕತ್ತರಿಸಿ,
ನಿರ್ಭೀಡೆಯಿಂದವಳ ಕೈ
ಹಿಡಿದು ನನ್ನ ಮನೆ ಮನವ
ಬೆಳಗಿಸಿಕೊಳ್ಳಬಹುದಿತ್ತು.
ಆದರೆ, ಜನಸಮೂಹದಲಿ
ಗೌಣವಾಗುವ ಭೀತಿಗಳಿಗಳುಕಿ,
ಸಮಾಜದ ಪ್ರತಿಷ್ಠೆಯೇ
ಪ್ರಮುಖ ಮಾನದಂಡಗಳಾಗಿ
ಅವಳನುಳಿಸಲಾಗದ ನಾನು ನಾನಾಗದೆ
ನಾನೀಗ ನಪುಂಸಕನಾದೆನೇ
ಎನ್ನುವ ಅಳುಕು ನನ್ನನ್ನೀಗ ಕಾಡುತ್ತಿದೆ.

**– ಕಿಗ್ಗಾಲು ಎಸ್ ಗಿರೀಶ್, ಮೂರ್ನಾಡು, ಕೊಡಗು**

*ಸಂಚಿಕೆಗಾಗಿ ಸಹಕರಿಸಿದವರು*

**ಶ್ರೀ ವೆಂಕಟೇಶ್ ದೊಡ್ಮನೆ, ತಲಕಾಲಕೊಪ್ಪ,**

**ಟೆಕ್ಸಾಸ್, ಅಮೇರಿಕಾ**

ನನ್ನ ಪ್ರಕಾರ ಪ್ರೀತಿಗೆ ಯಾವುದೇ ಉದ್ದೇಶವಿರದು. ಅದು ಉದ್ದೇಶ ಪೂರ್ವಕವಾಗಿ ಹುಟ್ಟುವುದಿಲ್ಲ. ಒಂದು ವೇಳೆ ಆ ಪ್ರೀತಿಗೆ ಪ್ರೀತಿಯನ್ನು ಹೊರತುಪಡಿಸಿ ಉಳಿದ ಯಾವುದೇ ಉದ್ದೇಶವಿದ್ದರೆ ಅದು ಆಯಾ ಉದ್ದೇಶದೊಂದಿಗೇ ಅಂತ್ಯಗೊಳ್ಳುತ್ತದೆ. ಅದನ್ನು ಪ್ರೇಮ ಎನ್ನುವುದಕ್ಕಿಂತ ವ್ಯವಹಾರ ಎನ್ನಬಹುದೇನೋ.. ನನ್ನ ಪ್ರೀತಿಗೂ ಯಾವುದೇ ಉದ್ದೇಶವಿಲ್ಲ. ಅದು ಅನುದ್ದೇಶಿತ ಪ್ರೇಮ. ಅದೇನೇ ಇದ್ದರೂ ಈ ಪ್ರೇಮವೆಂಬುದು ತುಂಬ ಸಂತೋಷದ, ಆನಂದದ ಸ್ಥಿತಿ. ಅದು ಪ್ರಕೃತಿಯ ಪ್ರತಿ ಕಣದಲ್ಲೂ ತೋರಿಕೊಳ್ಳುತ್ತದೆ. ಗುರುತಿಸುವ, ಪಡೆಯುವ ಮನಃಸ್ಥಿತಿ ಬೇಕಷ್ಟೆ. ಇಂಥಹ ಪ್ರೇಮವನ್ನು ವಾಚ್ಯವಾಗಿಸುವಲ್ಲಿ ನಾವು ಸೋಲುತ್ತೇವೆ. ಹಾಗಾಗಿಯೇ ಪ್ರಕೃತಿ ಮತ್ತು ಪ್ರೇಮ ಎರಡೂ ಅನಿರ್ವಚನೀಯವೇ. ಪ್ರೇಮದಲ್ಲಿ ಪ್ರಕೃತಿಯಿದೆ ಹಾಗೆಯೇ ಪ್ರಕೃತಿಯಲ್ಲಿ ಪ್ರೇಮವಿದೆ. ಇಂಥಹ ಪರಿಪೂರ್ಣ ಪ್ರೇಮದ ಒಂದಂಶವಾಗಿ ನನಗೆ ನೀನು ಕಾಣುತ್ತೀಯ. ಇಲ್ಲಿ ನಾ ನಿನ್ನ ಪ್ರೇಮಿಸುವೆ ಎನ್ನುವುದನ್ನು ನಿನಗೆ ತಿಳಿಸದೇ ನಾ ನಿನ್ನಿಂದ ಪ್ರೇಮವನ್ನು ಹೊಂದಬಹುದು. ಇದೇ ಕಾರಣಕ್ಕಾಗಿಯೇ ನಾ ನಿನಗೆ ನನ್ನ ಪ್ರೇಮದ ವಿಷಯವನ್ನು ತಿಳಿಸಿಲ್ಲ. ಇದು ಪ್ರೇಮವನ್ನು ವಾಚ್ಯವಾಗಿಸಬಾರದೆಂಬ ನನ್ನದೇ ಕಟ್ಟಳೆ.

ಪ್ರೇಮವೆಂಬುದು ಮದುವೆಯಲ್ಲೇ ಐಕ್ಯಗೊಳ್ಳಬೇಕೆಂಬ ಉದ್ದೇಶ ನನಗಿಲ್ಲ. ಪ್ರಕೃತಿಯನ್ನು ನಾವು ಪ್ರೇಮಿಸುತ್ತೇವೆ. ಹಾಗಂತ ಅದರೊಂದಿಗೆ ಮದುವೆಯಾಗಲು ಸಾಧ್ಯವೇ..?

ಪ್ರೇಮವೆಂಬುದು ಆತ್ಮದ ಸ್ವರೂಪ, ಹಾಗಾಗಿ ಪ್ರತ್ಯಾತ್ಮ ಪ್ರೇಮವೇ ವಿಶ್ವಪ್ರೇಮದ ಮೊದಲ ಹಂತ ನಾನು ಮೌನವಾಗಿಯೇ ಪ್ರೇಮಿಸುತ್ತೇನೆ. ಮೌನದಲ್ಲಿಯೇ ಅದು ಐಕ್ಯವಾಗಲಿ.

ನಿನ್ನ ದಿವ್ಯ ಮೌನವನ್ನು ಧೇನಿಸುತ್ತ...

**ನಿನ್ನವನಲ್ಲದ ನಾನು..**

**ಸುಂಕಸಾಳ**

**ವಿಷಯ ವಿಶೇಷ:**

**ವಿಶ್ವದ 3ನೇ ನೌಕಾಪಡೆ ಪೈಲಟ್ ತರಬೇತಿ ಕೇಂದ್ರ ಭಾರತದಲ್ಲಿ!!**

ನೌಕಾಪಡೆಯ ಯುದ್ಧವಿಮಾನಗಳನ್ನು ನಿರ್ವಹಿಸಲು ಪೈಲಟ್ ಗಳಿಗೆ ತರಬೇತಿ ನೀಡುವ ಅಪರೂಪದ ಹಾಗೂ ಅತಿ ದುಬಾರಿ ತರಬೇತಿ ಕೇಂದ್ರವನ್ನು ರಕ್ಷಣಾ ಇಲಾಖೆ ಗೋವಾದಲ್ಲಿ ಆರಂಭಿಸಲಿದೆ. ಇದು ಪ್ರಪಂಚದಲ್ಲಿ 3ನೆಯದು ಎಂಬ ಹೆಗ್ಗಳಿಕೆ ಪಡೆದಿದೆ. ಸದ್ಯಕ್ಕೆ ಅಮೇರಿಕಾ ಹಾಗೂ ರಷ್ಯಾ ದೇಶಗಳು ಮಾತ್ರ ಇಂತಹ ಕೇಂದ್ರವನ್ನು ಹೊಂದಿವೆ. ಇಷ್ಟು ದಿನ ಭಾರತದ ಯುದ್ಧವಿಮಾನ ಪೈಲಟ್‌ಗಳಿಗೆ ವಿದೇಶದಲ್ಲಿ ತರಬೇತಿ ನೀಡಲಾಗುತ್ತಿತ್ತು. ಈ ಕೇಂದ್ರದ ನಿರ್ಮಾಣ ಕಾರ್ಯ ಈಗಾಗಲೇ ಆರಂಭಗೊಂಡಿದ್ದು ಇನ್ನು ಮುಂದೆ ದೇಶೀಯ ಪೈಲಟ್‌ಗಳಷ್ಟೇ ಅಲ್ಲದೆ ಬೇರೆ ಬೇರೆ ದೇಶದ ಪೈಲಟ್ ಗಳಿಗೂ ಇಲ್ಲಿ ತರಬೇತಿ ನೀಡುವ ಮೂಲಕ ಜಾಗತಿಕವಾಗಿ ಭಾರತ ತನ್ನ ಗೌರವ ಸ್ಥಾನಮಾನಗಳನ್ನು ಹೆಚ್ಚಿಸಿಕೊಳ್ಳಲಿದೆ.





# ನಾನು ಸೋಲುವುದಿಲ್ಲ.. ಸೋತರದು ನಾನಲ್ಲ..!!

**ಅಂತರಂಗದಿಂದ...**



**ಅ**ದು ಖಂಡಿತಾ ಅಹಂಕಾರದ ಮಾತಲ್ಲ. ತೀರಾ ಅಸಹಾಯ, ಹತಾಶ ಎನ್ನಿಸುವ ಕ್ಷಣಗಳಲ್ಲಿ ನನಗೆ ನಾನೇ ಹೇಳಿಕೊಳ್ಳುವ, ನನ್ನಲ್ಲೊಂದು ಹೊಸ ಆತ್ಮವಿಶ್ವಾಸ ತುಂಬಿಸುವ ಮಾತದು. ಪತ್ರಿಕೆಯನ್ನು ಸರಿಯಾದ ಸಮಯಕ್ಕೆ ತರಲಾಗುತ್ತಿಲ್ಲ ಎಂಬ ಕೊರಗು ನನ್ನನ್ನು ಬಹುವಾಗಿ ಕಾಡಿಸುತ್ತಿದೆ. ಚೈತ್ರರಶ್ಮಿಯ ಕುರಿತ ಓದುಗರ, ಬಳಗದ ಮಿತ್ರರ ಪ್ರೀತಿ ಅಭಿಮಾನ, ಕಾಳಜಿಗಳಿಗೆ ಮೂಕನಾಗಿದ್ದೇನೆ. ಚೈತ್ರರಶ್ಮಿಯನ್ನು ಒಂದು ವಿಶಿಷ್ಟ ಪತ್ರಿಕೆಯನ್ನಾಗಿ ರೂಪಿಸಬೇಕು, ಅದು ಹಳ್ಳಿ ಹಳ್ಳಿಗೆ ತಲುಪಬೇಕು, ಇನ್ನೂ ನೂರಾರು ಗ್ರಾಮೀಣ ಪ್ರತಿಭೆಗಳಿಗೆ ವೇದಿಕೆ ನೀಡುವಂತಾಗಬೇಕು ಎಂಬ ಕನಸು, ಕಾಳಜಿ, ಕಳಕಳಿ, ಹಠ ನನ್ನಲ್ಲಿ ತೀವ್ರವಾಗಿದ್ದರೂ ನನ್ನ ಮಾನಸಿಕ ಒತ್ತಡಗಳು,ಅನಿವಾರ್ಯ ಪರಿಸ್ಥಿತಿಗಳು ನನ್ನನ್ನು ಹಿಮ್ಮೆಟ್ಟಿಸುತ್ತಲೇ ಇದೆ. ಈ ಐದು ವರ್ಷಗಳಲ್ಲಿ ಚೈತ್ರರಶ್ಮಿಯನ್ನು ನಾನಂದುಕೊಂಡ ಹಾಗೆ ಕಟ್ಟಲು ಸಾಧ್ಯವಾಗಿಲ್ಲ ಎಂಬ ನೋವು ನನ್ನನ್ನು ತೀವ್ರವಾಗಿ ಬಾಧಿಸಿದೆ. ಇನ್ನು ನನ್ನ ವೈಯಕ್ತಿಕ ಬರಹಗಳ ಕುರಿತೂ ನನಗೆ ತೀವ್ರ ಅಸಮಾಧಾನವಿದೆ. ಆದರೆ ಎಲ್ಲ ಗೊತ್ತಿದ್ದೂ ಏನೂ ಮಾಡಲಾಗದೆ 'ಪಲ್ಕರಿದು ತಾಳಿಕೊಳೊ –ಮಂಕುತಿಮ್ಮ' ಎಂಬ ಆದೇಶವನ್ನು ಪಾಲಿಸಬೇಕಾಗಿರುವ ಕಾಲವಿದು. ಆದರೆ ಇಂತಹ ಪರಿಸ್ಥಿತಿಗಳು ನನಗೆ ಹೊಸದೇನೂ ಅಲ್ಲ. ಬದುಕಿನ ಹಲವು ಘಟ್ಟಗಳಲ್ಲಿ ನಾನು ಇಂತಹ ಅಸಹಾಯಕತೆಯನ್ನು ಮೌನವಾಗಿ ಎದುರಿಸಿದ್ದೇನೆ. ಗೆದ್ದಿದ್ದೇನೆ ಕೂಡಾ. ಪತ್ರಿಕೆ ಹುಟ್ಟಿದ್ದೂ ಕೂಡ ಅಂತಹ ವಿಷಮ ಪರಿಸ್ಥಿತಿಯಲ್ಲಿಯೇ. ಆದರ್ಶ, ಕನಸು, ವಾಸ್ತವಗಳ ನಡುವಿನ ವ್ಯತ್ಯಾಸ ನನ್ನನ್ನು ಛಿತನನ್ನಾಗಿಸಿದರೂ 'ಏನಾದರೂ ಮಾಡಬೇಕು' ಎಂಬ ನನ್ನ ಹುಂಬತನ, ಹಠ ಯಾವುದೋ ದೂರದ ಆಶಾಭಾವ ನನ್ನನ್ನು ಕ್ರಿಯಾಶೀಲನನ್ನಾಗಿಟ್ಟಿದೆ. ಇಷ್ಟೆಲ್ಲಾ ಚಿಂತನೆ,ವೇದನೆಗಳ ನಡುವೆಯೂ ಚೈತ್ರರಶ್ಮಿಯ ಈ ಐದು ವರ್ಷಗಳ ಹಾದಿ ನನಗೆ ಖಂಡಿತಾ ಒಂದು 'ಆತ್ಮಸಂತೋಷ'ವನ್ನು ತಂದು ಕೊಟ್ಟಿದೆ. ಆ ಆತ್ಮಸಂತೋಷವೇ ನನ್ನಲ್ಲಿ ಸದಾ ಹುರುಪನ್ನು ತುಂಬಿ ಇನ್ನಷ್ಟು ಹೊಸತನ್ನು ಮಾಡಲು ಪ್ರೇರೇಪಿಸುತ್ತಿದೆ. ಅಂದುಕೊಂಡದ್ದನ್ನು ಸಾಧಿಸಲಾಗುತ್ತಿಲ್ಲ, ಎಲ್ಲೋ ದಾರಿತಪ್ಪುತ್ತಿದ್ದೇನೆ, ಸೋಲುತ್ತಿದ್ದೇನೆ ಎಂದೆಲ್ಲಾ ಹಳಹಳಿಸುವ ಹತಾಶ ಕ್ಷಣಗಳಲ್ಲಿ ಆ ಆತ್ಮಸಂತೋಷವೇ ನನ್ನಲ್ಲಿ 'ನಾನು ಸೋಲುವುದಿಲ್ಲ, ಸೋತರದು ನಾನಲ್ಲ' ಎಂಬ ಮಾತನ್ನು ಹುಟ್ಟಿಸಿ ಆತ್ಮವಿಶ್ವಾಸವನ್ನು ತುಂಬುತ್ತಿದೆ.

ನಿಮಗೆ ಗೊತ್ತಿರಬಹುದು. ಇದು ಜಗತ್ತಿಗೇ ಆರ್ಥಿಕ ಕುಸಿತದ ಕಾಲ. 'ರೀಡರ್ಸ್ ಡೈಜೆಸ್ಟ್', 'ಟ್ರಿಬ್ಯೂನ್', 'ನ್ಯೂಯಾರ್ಕ್ ಟೈಮ್ಸ್', ನಂತಹ ವಿಶ್ವವಿಖ್ಯಾತ ಪತ್ರಿಕೆಗಳೇ ದಿವಾಳಿಯಂಚಿಗೆ ಬಂದಿವೆ. ಪೂರ್ತಿ ವ್ಯಾವಹಾರಿಕವಾಗಿ ನೂರಾರು ಚಂದಾದಾರರನ್ನಿಟ್ಟುಕೊಂಡ ನಮ್ಮ ಸುತ್ತಮುತ್ತಲಿನ

ಅನೇಕ ಪತ್ರಿಕೆಗಳು ಕುಸಿತದ ಹೊರೆಯನ್ನು ತಾಳಲಾರದೆ ಬಾಗಿಲು ಮುಚ್ಚುವ ದುರಂತ ಸ್ಥಿತಿಗೆ ಬಂದು ನಿಂತಿವೆ. ಚೈತ್ರರಶ್ಮಿ ಆರಂಭವಾಗಿ 3 ವರ್ಷದ ನಂತರ ಆರಂಭಗೊಂಡು ನಮ್ಮ ಪತ್ರಿಕೆಗಿಂತಲೂ ಆಕರ್ಷಕವಾಗಿ, ವರ್ಣಮಯವಾಗಿ ಬರುತಿದ್ದ, 300ಕ್ಕೂ ಹೆಚ್ಚು ಚಂದಾದಾರರನ್ನು ಹೊಂದಿದ್ದ (ನಾನೂ ಕೂಡಾ ಅದರ ಚಂದಾದಾರನಾಗಿದ್ದೆ) ಗೆಳೆಯರೊಬ್ಬರ ಕ್ರಿಯಾಶೀಲ ಪತ್ರಿಕೆ, ಪರಿಸ್ಥಿತಿಯ ಹೊಡೆತ ಎದುರಿಸಲಾಗದೆ ಸಂಪೂರ್ಣ ನಿಂತುಹೋಗಿದೆ. ಪತ್ರಿಕೆ ನಡೆಸಿ ಕೈ ಸುಟ್ಟುಕೊಂಡವರ ಸಂಖ್ಯೆಯೂ ಬಹು ದೊಡ್ಡದು. ಅದರಲ್ಲೂ ಇಂತಹ ವಿಷಮ ಪರಿಸ್ಥಿತಿಯಲ್ಲಿ 'ಚೈತ್ರರಶ್ಮಿ' ಯನ್ನು ನಿಲ್ಲದಂತೆ ನಡೆಸಿಕೊಂಡು ಹೋಗುವುದು ಎಷ್ಟು ಸವಾಲಿನ ಕೆಲಸ ಎಂಬುದರ ಅರಿವು ನಿಮಗಿದೆ ಎಂದು ನಂಬುತ್ತೇನೆ. ಈ ಹೊತ್ತಿನಲ್ಲಿ ಚೈತ್ರರಶ್ಮಿಯನ್ನು ಕಾಪಾಡುವ ಶಕ್ತಿಯೊಂದಿದ್ದರೆ ಅದು ನಿಮ್ಮ ಪ್ರೀತಿ, ಅಕ್ಕರೆ, ಅಭಿಮಾನಗಳು ಮಾತ್ರ. ಚೈತ್ರರಶ್ಮಿಯನ್ನು ನಿಯಮಿತವಾಗಿ ಹೊರತರಲು ನಾನು ಶಕ್ತಿಮೀರಿ ಪ್ರಯತ್ನಿಸುತ್ತಿದ್ದೇನೆ. ಮಾಸಿಕ ಪತ್ರಿಕೆಯಾಗಿದ್ದರೂ ಎರಡು ತಿಂಗಳಿಗೊಮ್ಮೆ ಸಂಚಿಕೆಯನ್ನು ಹೊರತರುತ್ತಿರುವ ಅನಿವಾರ್ಯತೆಯನ್ನು ನೀವು ಅರ್ಥಮಾಡಿಕೊಳ್ಳುತ್ತೀರಿ ಎಂಬುದು ನನ್ನ ನಂಬಿಕೆ. ನಿಮ್ಮೆಲ್ಲರ ಸಹಕಾರ, ಸ್ಫೂರ್ತಿ, ಬೆಂಬಲ, ಮಾರ್ಗದರ್ಶನ ನನ್ನ ಮಾನಸಿಕ ಶಕ್ತಿಯನ್ನು ಸಧೃಡವಾಗಿಸಿ ನವೋತ್ಸಾಹ ತುಂಬಲಿ, ಚೈತ್ರರಶ್ಮಿಯ ಮುಂದಿನ ದಿನಗಳನ್ನು ಉಜ್ವಲವಾಗಿಸಲಿ ಎಂದು ಪ್ರಾರ್ಥಿಸುತ್ತೇನೆ.

ಹಾಗೆ ನೋಡಿದರೆ ಇಷ್ಟೆಲ್ಲಾ ಅಡೆತಡೆಗಳ ನಡುವೆಯೂ ನಮ್ಮ ಪಾಲಿಗೆ ಇದೊಂದು ಸಂಭ್ರಮದ ಕಾಲ. ಕಳೆದ ನಾಲ್ಕೈದು ತಿಂಗಳಲ್ಲಿ ನಾವು ಬಳಗದ ಮಿತ್ರರ ಹಲವು ಸಾಧನೆಗಳಿಗೆ,ಅನೇಕ ಸಂತಸ, ಸಂಭ್ರಮಗಳಿಗೆ ಸಾಕ್ಷಿಯಾಗಿದ್ದೇವೆ. ಪತ್ರಿಕೆ ವಿಳಂಬವಾದರೂ ಈ ದಿನಗಳಲ್ಲಿ ಪತ್ರಿಕೆಯ ಪರಿವಾರ ಬೆಳೆದಿದೆ. ಕಳೆದ ಮೂರು ತಿಂಗಳಲ್ಲಿ ಹಲವು ವಿಶಿಷ್ಟ ಸಾಧಕರನ್ನು, ಸಹೃದಯರನ್ನು ಭೇಟಿ ಮಾಡುವ, ಅವರ ಸಾಧನೆಯ ಯಶೋಗಾಥೆಯನ್ನು ನೋಡುವ, ಕೇಳುವ, ಅವರೊಂದಿಗೆ ಮಾತನಾಡುವ, ಒಡನಾಡುವ ಭಾಗ್ಯ ನನ್ನದಾಯಿತು. ಎಲ್ಲಕ್ಕಿಂತ ಹೆಚ್ಚಾಗಿ ನನಗೆ ಅತ್ಯಂತ ಆನಂದ ನೀಡಿದ ಸಂಗತಿಯೆಂದರೆ ನಮ್ಮ ಬಳಗದ ಕವಯಿತ್ರಿ ಪ್ರಿಯಾ ಕಲ್ಲಬ್ಬೆಯವರ 'ಜೀವನ್ಮುಖಿ' ಕವನ ಸಂಕಲನ – ಪುಸ್ತಕ ಪ್ರಾಧಿಕಾರದ ಬಹುಮಾನದೊಂದಿಗೆ ಬಿಡುಗಡೆಯಾದದ್ದು . ನನ್ನ ಇಡೀ ಈ ಐದು ವರ್ಷಗಳ ಆಶಯ, ಪ್ರಯತ್ನ, ನನ್ನ ಬದುಕಿನ ಮಹತ್ವದ ಕನಸೊಂದು ಸಾಕಾರಗೊಂಡ ಕಾಲ. ನಮ್ಮ ಸೃಜನಶೀಲತೆಯ ಹುಡುಕಾಟಕ್ಕೆ ಸಿಕ್ಕ ಜಯ. ನೂರಕ್ಕಿಂತಲೂ ಹೆಚ್ಚಿನ ಉದಯೋನ್ಮುಖ ಪ್ರತಿಭಾವಂತ ಬರಹಗಾರರಿಗೆ ಪೈಪೋಟಿ ನೀಡಿ ರಾಜ್ಯಮಟ್ಟದ ಸ್ಪರ್ಧೆಯಲ್ಲಿ ಗ್ರಾಮೀಣ ಪ್ರತಿಭಾವಂತೆಯೊಬ್ಬರು ಪ್ರಾಧಿಕಾರದ ಗೌರವಕ್ಕೆ ಪಾತ್ರರಾಗಿ ತಮ್ಮ ಮೊದಲ ಕವನ ಸಂಕಲನ 'ಜೀವನ್ಮುಖಿ'ಯನ್ನು ಹೊರತಂದದ್ದು, ಅದಕ್ಕೆ ಚೈತ್ರರಶ್ಮಿ ವೇದಿಕೆಯಾಗಿದ್ದು ನನ್ನ ಪಾಲಿಗೆ ಅತ್ಯಂತ ಆನಂದದ, ಹೆಮ್ಮೆಯ, ಅಭಿಮಾನದ ಸಂಗತಿ. ಚೈತ್ರರಶ್ಮಿಯ ಬಳಗದ ಪ್ರತಿಯೊಬ್ಬರೂ ಇಂತಹದೊಂದು ಸಾಧನೆ ಮಾಡುವಂತಾದ ದಿನ ನನ್ನ ಪಾಲಿಗೆ ಸುವರ್ಣದಿನ. ಬಳಗದ ಪ್ರತಿಯೊಬ್ಬರ ವೈಯಕ್ತಿಕ ಸಾಧನೆಯೇ ಚೈತ್ರರಶ್ಮಿಯ ಸಾಧನೆ ಎಂದು ನಾನು ನಂಬುತ್ತೇನೆ. ಇದಲ್ಲದೆ 'ವಿಕ್ರಮ' ಪತ್ರಿಕೆಯ ರಾಜ್ಯಮಟ್ಟದ ಕಥಾಸ್ಪರ್ಧೆಯಲ್ಲಿ ನಮ್ಮ ಬಳಗದ ನವೀನ್ ಭಟ್ ಗಂಗೋತ್ರಿ ಪ್ರಥಮ ಬಹುಮಾನ ಹಾಗೂ ಶ್ರೀಮತಿ ಗೀತಾ ಕೊಂಕೊಡಿ ತೃತೀಯ ಬಹುಮಾನ ಗಳಿಸಿದ ಸಾಧನೆ ಮಾಡಿದ್ದಾರೆ. ಅವರಿಗೆ ಅಭಿನಂದನೆ. ಜತೆಗೆ ಪ್ರತೀಕ್ಷೆ, ಮುಗುಳು ಕವನ ಸಂಕಲನಗಳ ಮೂಲಕ ಅನೇಕ ಹಿರಿಯರ ಪ್ರಶಂಸೆಗೆ ಪಾತ್ರರಾದ ಶ್ರೀಮತಿ ಕಮಲಾ ಕೊಂಡದಕುಳಿ ಉತ್ತರಕನ್ನಡ





# ॥ ಪ ತ್ರ ರ ಶ್ಮಿ ॥

## ಐಕ್ಯಗೊಳ್ಳಲಿ ಪ್ರೇಮ ಮೌನದಲ್ಲಿ....

**ನಲುಮೆಯ ಒಲುಮೆಗೆ,**

ಬಹಳ ದಿನಗಳಿಂದ ನಮ್ಮಿಬ್ಬರ ನಡುವೆ ನಡೆಯುತ್ತಿದ್ದ ಮೌನ ಸಂವಾದಕ್ಕೊಂದು ಬ್ರೇಕ್ ಹಾಕಿ ಅಕ್ಷರಗಳ ಮೂಲಕ ಮಾತನಾಡು ತ್ತಿದ್ದೇನೆ. ಹೌದು ಗೆಳತೀ, ನಮ್ಮಿಬ್ಬರ ನಡುವೆ ಧ್ವನಿಪೂರ್ವಕ ಸಂವಾದಕ್ಕಿಂತ ಮೌನಗಳೊಡನೆ ಮಾತಾಡಿದ್ದೇ ಹೆಚ್ಚು. ನಿನ್ನ ಮೌನಕೆ ನನ್ನ ಮೌನ, ಅದಕ್ಕೆ ಉತ್ತರ ಮತ್ತೆ ನಿನ್ನ ಮೌನವೇ, ಇಂಥಹ ಮೌನಮಾತಿನ ಪರಂಪರೆಯೇ ನಮ್ಮ ಪ್ರೇಮಕ್ಕಿಟ್ಟ ಕಳಶವೆಂದು ಭಾವಿಸುತ್ತೇನೆ. ಎಲ್ಲ ಪ್ರೇಮಿಗಳಲ್ಲಿ ಹೃದಯ ಮಾತಾಡಿದರೆ, ನಮ್ಮ ನಡುವೆ ಮಾತ್ರ ಮೌನವೇ ಗದ್ದಲವೆಬ್ಬಿಸುವಷ್ಟು ಮಾತಾಡುತ್ತದೆ. ಮೌನವು ಇಷ್ಟೊಂದು ಸಮರ್ಥ ಭಾಷೆಯೆಂದು ಅರಿವಾದದ್ದೇ ನಿನ್ನಿಂದ ಗೆಳತೀ. ಶಾಬ್ದಿಕವಾದ ಭಾವ ಸಂವಹನಕ್ಕಿಂತ ಮೌನ ಸಂವಹನ ಹೆಚ್ಚು ಸಮರ್ಥ ಎಂದು ನನಗರ್ಥವಾಗಿದ್ದೇ ನಿನ್ನಿಂದ. ಅಲ್ಲಿ ನಾಲಿಗೆಗೆ ಕೆಲಸವಿಲ್ಲ... ಕಣ್ಣೇ ಮಾತಾಡುತ್ತದೆ.

ನಿಜ ಹೇಳಬೇಕೆಂದರೆ ನನ್ನಲ್ಲಿ ಪ್ರೇಮ ವುಕ್ಕಿಸಿದ್ದೇ ಈ ನಿನ್ನ ಮುಗ್ಧ ನಯನಗಳು. ನಾನು ಮುಗ್ಧತೆಗೆ ಸೋಲುವ ವ್ಯಕ್ತಿ. ಅನುಭವಕ್ಕೆ ಮಣಿಯುವ ವ್ಯಕ್ತಿ. ಹಾಗಾಗಿ ನಾ ನಿನಗೆ 'ಸೋತಿದ್ದೇನೆ ಎನ್ನುವ ವಾಕ್ಯವೇ ಸರಿ. ನಿಸರ್ಗದ ಸಹಜತೆಯ ಪ್ರತೀಕ ಈ ಮುಗ್ಧತೆ. ನಿನ್ನಲ್ಲಿರುವ ನನ್ನ ಒಂದೇ ಒಂದು ಆಕರ್ಷಣೆಯೆಂದರೆ, ನಿನ್ನ ಆ ಮುಗ್ಧನಯನ. ಅದು ನನ್ನಂಥವನನ್ನು ಒಂದೇ ನೋಟಕ್ಕೆ ಕರಗಿಸಿ ಇನ್ನಿಲ್ಲವಾಗಿಸುವಷ್ಟು ಸಮರ್ಥ. ನಾ ನಿನ್ನ ಏಕೆ ಪ್ರೇಮಿಸಿದೆ ಎಂಬ ಪ್ರಶ್ನೆ ಆಗಾಗ ಕಾಡುತ್ತಿರುತ್ತದೆ. ನಿನ್ನ ಸೌಂದರ್ಯಕ್ಕೋ, ಸಹಜ ಕಾಂಕ್ಷೆಗೋ ಅಥವಾ ಏನು..? ನಿನ್ನ ಸೌಂದರ್ಯ ನನ್ನ ಸೆಳೆದಿರಲಿಕ್ಕಿಲ್ಲ. ಏಕೆಂದರೆ, ನಿನಗಿಂತಲೂ ಸೌಂದರ್ಯವತಿಯರನ್ನು ನೋಡಿದ್ದೇನೆ. ಮತ್ತೇಕೆ? ಎಂದರೆ, ಪೂರ್ವಜನ್ಮದ ಯಾವುದೋ ಬಂಧ ನನ್ನನ್ನು ನಿನ್ನತ್ತ ಸೆಳೆದಿದೆ ಬಂದು ಸಮಾಧಾನಿಸಿಕೊಳ್ಳುತ್ತೇನೆ. ಕೊನೆಗೂ ಒಂದೇ ಒಂದು ಉತ್ತರವೆಂದರೆ, ಅದು ನಿನ್ನ ಮುಗ್ಧತೆಯೇ.

ನಿನ್ನ ಈ ಮೌನ ಅದೆಷ್ಟು ಅರ್ಥಗರ್ಭಿತವೆಂದರೆ, ನನ್ನೊಂದಿಗೆ ನೀನು ಮಾತನಾಡಿದ್ದಕ್ಕಿಂತ ಸಾವಿರ ಪಟ್ಟು ಹೆಚ್ಚು ಒಂದು ಅರ್ಥಪೂರ್ಣ ಮೌನ ಸಾವಿರ ಭಾವವನ್ನು ವ್ಯಕ್ತಪಡಿಸುತ್ತದೆ. ಅಲ್ಲಿ ಒಪ್ಪಿಗೆ, ಸ್ವೀಕಾರ ಮತ್ತು ನಿರಾಕರಣೆಗಳೆಂಬ ಕ್ರಿಯೆಯಿಲ್ಲ. ಅಲ್ಲಿರುವುದು ಒಂದೇ, ಅದು ಮೌನ. ಮೌನದ ಕುರಿತು ಮಾತಿನಲ್ಲಿ ಹೇಳಹೊರಟರೆ ಅದು ಅಪೂರ್ಣ. ಹಾಗಾಗಿ ಮೌನಕ್ಕೇ ಶರಣು ಹೋಗದೇ ಗತಿಯಿಲ್ಲ. ನಮ್ಮ ಈ ಮೌನ ಎಲ್ಲರಲ್ಲೂ ಸಾಧ್ಯವಾಗುತ್ತಿದ್ದರೆ ಈ ಜಗತ್ತು ಎಷ್ಟು ಶಾಂತವಾಗಿರುತ್ತಿತ್ತು ಎಂದು, ಮೌನದ ಪರಿಭಾಷೆಯನ್ನೇ ಅರಿಯದೇ ಕೋಲಾಹಲವೆಬ್ಬಿಸುವ ಜನರನ್ನು ನೋಡಿದಾಗ ಅನಿಸುತ್ತದೆ. ಆಗೆಲ್ಲ ನಿನ್ನ ನೆನಪಾಗಿ ಮೌನಿಯಾಗುತ್ತೇನೆ. ನಿಜಕ್ಕೂ ನನ್ನ ಪ್ರೇಮ ಹುಟ್ಟಿದ್ದೇ ಅದೊಂದು ಗಾಢ ಮೌನದಲ್ಲಿ. ಅಸಲಿಗೆ, ನಮ್ಮಿಬ್ಬರ ನಡುವೆ ಈ ಪ್ರೇಮ ಸಂವಹನ ಒಮ್ಮೆಯೂ ಆಗಿದ್ದೇ ಇಲ್ಲ. ಹಾಗಾಗಿಯೇ ನನ್ನ ಈ ಏಕಾಂಗಿ ಪ್ರೇಮವನ್ನು ನೋಡಿ ಆಪ್ತರು ಕೇಳಿದ್ದಿದೆ. ನೀನು ಯಾವ ಉದ್ದೇಶದಿಂದ ಪ್ರೀತಿಸುವೆ? ಎಂದು. ಇದಕ್ಕೆ ಉತ್ತರ ನನಗೂ ತಿಳಿಯದು...

ಭೂಮಿಯೊಳಗೆ ಇಂಗಿ ಅಂತರ್ಜಲದ ಮಟ್ಟ ಏರಲು ಸಹಾಯವಾಗುವುದು. ಅಲ್ಲದೆ ನೀರಿನ ಓಟಕ್ಕೆ ತಡೆಯೊಡ್ಡಿದಂತಾಗಿ ಮಣ್ಣಿನ ಸವಕಳಿ ಕಡಿಮೆಯಾಗುತ್ತದೆ. ಇಂಗುಗುಂಡಿಗಳ ಬಗ್ಗೆ ಜನರಿಗೆ ಕೆಲವು ಅನುಮಾನಗಳಿವೆ. ಇಂಗುಗುಂಡಿಯ ರಚನೆಗೆ ನಿರ್ಧಿಷ್ಟ ಅಳತೆ ಇಲ್ಲ. ಆದರೆ ಶೌಚಾಲಯ, ಮೋರಿಗಳಿಂದ ಮಾತ್ರ ೩೦ ಅಡಿ ದೂರ ಇರಲಿ. ಒಂದು ಮೀಟರ್ ಉದ್ದ ೧/೨ ಮೀ. ಅಗಲವಾದರೂ ಸರಿ. ೫೦ ಲೀ ನೀರಿನಿಂದ ೫೦ ಲಕ್ಷ ಲೀಟರ್ ನೀರು ಹಿಡಿಯುವುದಾದರೂ ಸರಿ. ಜಾಗಗಳಿಗನುಕೂಲವಾಗಿ ಇಂಗುಗುಂಡಿ ನಿರ್ಮಿಸಬಹುದು. ಪುಟ್ಟ ಪುಟ್ಟ ಇಂಗುಗುಂಡಿಗಳನ್ನು ತೋಡಿ 'ಜಲ ಮರುಪೂರಣ" ವಾದರೆ ಭೂಮಿಯೊಳಗಿನ ನೀರಿನ ಮಟ್ಟ ಏರಿದಂತೆ.

ಪೇಟೆಗಳಲ್ಲಿ ಮನೆಯ ಮಾಡಿನಿಂದ (ಛಾವಣಿ) ಇಳಿದ ನೀರನ್ನು ಅಲ್ಲಲ್ಲೆ ಮಣ್ಣಿನೊಳಗೆ ಇಂಗಿಸುವುದು, ಸರಳ ಮತ್ತು ವಿಧಾನ. ಅಥವಾ ಛಾವಣಿ ನೀರನ್ನು ತೆಂಗಿನ ಮರದ ಬುಡಕ್ಕೆ ಬಿಡುವುದು ಇದರಿಂದ ಬಾವಿಯಲ್ಲಿ ನೀರಿನ ಪ್ರಮಾಣವೂ ಏರುತ್ತದೆ.

ಬನವಾಸಿ ಸಮೀಪದ ಹುಲೇಮಳಿಗೆಯಂತ ಪುಟ್ಟಗ್ರಾಮ "ಜಲಸಾಕ್ಷರತಾ" ಆಂದೋಲನದಿಂದ ನೀರಿನ ಸಮಸ್ಯೆ ಇಲ್ಲವಾಗಿಸಿಕೊಂಡಿದೆ. ಅಲ್ಲಿ ಊರ ಹುಡುಗರೆಲ್ಲಾ ಸೇರಿ ಸುಮಾರು '೬೦೦ ಎಕರೆ' ಪ್ರದೇಶದಲ್ಲಿ ಇಂಗುಗುಂಡಿಗಳನ್ನು ತೋಡಿ "ಜಲಮರುಪೂರಣ" ದಂತಹ ಅದ್ಭುತ ಕಾರ್ಯವನ್ನು ಮಾಡಿ ಪ್ರಕೃತಿಗೆ ತಮ್ಮ ಋಣ ಸಂದಾಯವನ್ನು ಮಾಡುತ್ತಿದ್ದಾರೆ.

ಈಗ ಮಲೆನಾಡಿಗೂ ಬರ ಎದುರಿಸುವ ಸ್ಥಿತಿ ಬಂದಿದೆ. ಹಳ್ಳಿ, ಪೇಟೆ, ಎಲ್ಲಾ ಕಡೆಗೂ ಸಾಮೂಹಿಕ "ಜಲ ಸಾಕ್ಷರತಾ" ಆಂದೋಲನ ನಡೆಯಬೇಕಿದೆ. ನೀರಿನ ಮಿತ ಬಳಕೆ, ಉಳಿಕೆ, ಸೋರಿಕೆ ಎಲ್ಲದಕ್ಕೂ ತಡೆಯೊಡ್ಡಿ ಅಂತರ್ಜಲದ ಮಟ್ಟದ ಏರಿಕೆಯಲ್ಲಿ ನಮ್ಮ ಪಾಲು ಇರುವುದಾದರೆ ಮನುಷ್ಯನಾಗಿ ಹುಟ್ಟಿದ್ದಕ್ಕೆ ಸಾರ್ಥಕ ಅಲ್ಲವೆ ? ಇಂದಿನಿಂದ ಮಳೆನೀರ ಕೊಯ್ಲು ಅಭಿಯಾನ ನಮ್ಮಿಂದಲೇ ಆರಂಭವಾಗಲಿ.

(ವಿವರ ಒದಗಿಸಿದವರು :ರಾಮಕೃಷ್ಣ ಹೇಮಾದ್ರಿ)

## ಜಾರಿಬಿಡಲಿ

# ಕಣ್ಣ ಬಿಂದು

ಕಾವ್ಯ ರಶ್ಮಿ

– ವಿನಯ್, ದಂಟಕಲ್

ಜಾರಿ ಬಿಡಲಿ ಕಣ್ಣ ಬಿಂದು
ನೋವ ಮರೆಸುವಲ್ಲಿ,
ಚಿಮ್ಮಿ ಬರಲಿ ನಗುವ ಬುಗ್ಗೆ
ನೋವ ನಗಿಸುವಲ್ಲಿ ॥

ಕಳೆದಾಗಿದೆ ನೂರು ಕಷ್ಟ
ಮುಂದೆ ಇರಲಿ ನಲಿವ ಬೆಟ್ಟ
ಬಾಳ ಬುತ್ತಿ ಅರಳೋ ಮುನ್ನ
ಜಾರಿ ಬಿಡಲಿ ಕಣ್ಣ ಬಿಂದು ॥

ನಲಿವು ಬಾಳ ಸ್ವಪ್ನದಂತೆ
ಮನವ ಮೆರೆಸುತಿರುವುದು
ನೂರು ನೋವು ಎದುರು ಬರಲಿ
ನಲಿವು ಹಿಂದೆ ಬರುವುದು ॥







ಜಿಲ್ಲಾ ಸಾಹಿತ್ಯ ಪರಿಷತ್ತಿನ ಕಾರ್ಯಕಾರಿ ಮಂಡಳಿಯ ಆಹ್ವಾನಿತ ಸದಸ್ಯರಾಗುವ ಗೌರವ ಪಡೆದಿದ್ದಾರೆ. ಗೆಳೆಯ ಎನ್ವಿ ವೈದ್ಯ ಹೆಗ್ಗಾರ್ 'ಉಂಚಳ್ಳಿ ಓದುಗರ ವೇದಿಕೆ' ಯ ಕಾವ್ಯ ಸ್ಪರ್ಧೆಯಲ್ಲಿ ಪ್ರಥಮ ಬಹುಮಾನ, ಶ್ರೀಮತಿ ಕಪಿಲಾ ಶ್ರೀಧರ್ 'ಕನ್ನಡ ಸಂಘರ್ಷ ಸಮಿತಿ' ಯ ರಾಜ್ಯ ಮಟ್ಟದ ಕಥಾಸ್ಪರ್ಧೆಯಲ್ಲಿ ತೃತೀಯ ಬಹುಮಾನ ಗಳಿಸಿ ಬಳಗದ ಸಂತಸವನ್ನು ಇಮ್ಮಡಿಗೊಳಿಸಿದ್ದಾರೆ. ಗೋವಾ ರಾಜ್ಯದಲ್ಲಿ ಕನ್ನಡ ,ಸಂಸ್ಕೃತ ಭಾಷೆಗಳ ಕಂಪನ್ನು ಪಸರಿಸುತ್ತಿರುವ ಹಿರಿಯ ಮಿತ್ರ ಮಹಾಬಲ ಭಟ್ ಈಗ ಗೋವಾ ಕನ್ನಡ ಸಮಾಜ ಹೊರತರುತ್ತಿರುವ 'ಗೋವಾ ಕನ್ನಡ ಜನನುಡಿ' ಮಾಸಿಕ ಪತ್ರಿಕೆಯ 'ಗೌರವ ಸಂಪಾದಕ'ರಾಗಿ ಆಯ್ಕೆಯಾಗಿ ಅತ್ಯಂತ ವಿಶಿಷ್ಟ ಹಾಗೂ ವಿಭಿನ್ನವಾಗಿ ಪತ್ರಿಕೆಯನ್ನು ಹೊರತರುತ್ತಿದ್ದಾರೆ. 'ಜನನುಡಿ' ಯಲ್ಲಿ ಚೈತ್ರರಶ್ಮಿಯಲ್ಲಿ ಪ್ರಕಟವಾಗಿರುವ ಅನೇಕ ಲೇಖನಗಳು ಮರುಪ್ರಕಟಗೊಳ್ಳುತ್ತಿರುವುದು, ಗೋವಾ ಕನ್ನಡಿಗರಿಗೆ ತಲುಪುತ್ತಿರುವುದು ಹೆಮ್ಮೆಯ ಸಂಗತಿ. ಚೈತ್ರರಶ್ಮಿ ಬಳಗದ ಸಾಧನೆಯ ಪರ್ವ ವಿಸ್ತಾರಗೊಳ್ಳಲಿ ಎಂದು ಆಶಿಸೋಣ.

'ಅದ್ಭುತಗಳಿರದಲ್ಲ, ಭವ್ಯಕ್ಕೆ ಹದ್ದಿಲ್ಲ, ಮೌನದಲಿ ಸಿದ್ಧನಿರು' ಇದು ಮಂಕುತಿಮ್ಮನ ಉಪದೇಶ. ಅಂತಹ ಅನನ್ಯ ಅದ್ಭುತಗಳೂ, ಹದ್ದಿಲ್ಲದ ಭವ್ಯತೆಯೂ ಸಿದ್ಧಗೊಳ್ಳುವ ಕಾಲಕ್ಕಾಗಿ ಮೌನದಿಂದ ಕಾಯೋಣ, ಹಾರೈಸೋಣ, ಪ್ರಾರ್ಥಿಸೋಣ.

– ನಿಮ್ಮವನು ರಾಜಂ

## *ವಿಷಯ – ವಿಶಿಷ್ಟ:*

### ಅರುಷಿ ಭಟ್ನಾಗರ್ –

### ವಿಶ್ವದ ಅತ್ಯಂತ ಕಿರಿಯ ಕುಂಚ ಕಲಾವಿದೆ.

***ಪುಣೆಯ 6 ವರ್ಷದ ಬಾಲಕಿ ಅರುಷಿ ಭಟ್ನಾಗರ್ ವಿಶ್ವದ ಅತ್ಯಂತ ಕಿರಿಯ ವೃತ್ತಿಪರ ಕುಂಚ ಕಲಾವಿದೆ ಎಂಬ ದಾಖಲೆಯೊಂದಿಗೆ ಗಿನ್ನೆಸ್ ದಾಖಲೆಗೆ ಸೇರ್ಪಡೆಯಾಗಿದ್ದಾಳೆ. ಜನಿಸಿದ 2 ತಿಂಗಳಲ್ಲೇ ಚಿತ್ರರಚನೆ ಆರಂಭಿಸಿದ್ದ ಅರುಷಿ ಇದುವರೆಗೂ 3 ಸಾವಿರಕ್ಕೂ ಅಧಿಕ ಚಿತ್ರಗಳನ್ನು ಬರೆದಿದ್ದಾಳೆ. 10 ನಗರಗಳಲ್ಲಿ ಈಕೆಯ ಪೇಂಟಿಂಗ್ ಗಳ 21 ಪ್ರದರ್ಶನಗಳು ನಡೆದಿವೆ. 11 ತಿಂಗಳಿದ್ದಾಗ ಅರುಷಿ ಬರೆದಿದ್ದ ಚಿತ್ರವೊಂದು 5 ಸಾವಿರ ರೂ. ಮಾರಾಟಗೊಂಡಿತ್ತು!!.***

## ಕುಟುಕು

ಒಮ್ಮೆ ಕೇಳಿದೆ
ನನ್ನ ಹುಡುಗಿಗೆ
ನಿನಗೇನು ಬೇಕೆಂದು..
ಅವಳು ಹೇಳಿದಳು:
ಹೃದಯ ಕಿತ್ತುಕೊಡು
ಡಾಕ್ಟರ್ ಹೇಳಿದ್ದಾರೆ
ನನಗೆ ಹಾರ್ಟ್‌ವೀಕ್
ಇದೆಯೆಂದು..!

* * *

– ವಿಶ್ವನಾಥ ಸುಂಕಸಾಳ

# ನೆಲಮೂಲ ಮರೆತ ನವ್ಯ ಪ್ರಜೆಗಳು ನಾವು ! ?



ಇನ್ನೂ ಬಹುಕಾಲ ಈ ದೇಶದ ಮಣ್ಣಿನ ಮಗ ಏನಯ್ಯ ಬೋರ, ಅನ್ನಿಸಿಕೊಂಡಿರಲಾರ.

– ಸಂಜಯ್ ಭಟ್ ಬೆಣ್ಣೆ, ಶಿರಸಿ

**ಹೌ**ದೆನ್ನುತ್ತೀರೋ, ಇಲ್ಲಾನ್ನುತ್ತೀರೋ ನಂಗೊತ್ತಿಲ್ಲ. ಆದ್ರೆ ಈ ದೇಶದಲ್ಲಿ ಒಂದಿಷ್ಟು ನುಡಿಗಳು ಚಾಲ್ತಿಯಲ್ಲಿವೆ. "ಕೃಷಿತೋ ನಾಸ್ತಿ ದುರ್ಭಿಕ್ಷಂ" "ರೈತನೇ ನಮ್ಮ ದೇಶದ ಬೆನ್ನೆಲುಬು." "ನಮ್ಮ ಭವ್ಯ ಭಾರತವು ಕೃಷಿ ಪ್ರಧಾನವಾದ ರಾಷ್ಟ್ರ". "ಇವನೇ ನೋಡು ಅನ್ನದಾತ ಹೊಲದಿ ದುಡಿದೇ ದುಡಿವನು" ಅನ್ನದಾತ ಸುಖೀಭವ, ಅನ್ನದಾನಂ ಮಹಾದಾನಂ, ಹೊತ್ತಿಗೊಂದು ತುತ್ತಿಟ್ಟವನ ನೆತ್ತಿನೇವರಿಸು / ಅವನ ಭತ್ತದುಗ್ರಾಣ ನೂರ್ಮಡಿಸಲು ಮೆಚ್ಚಿ ಹಾರೈಸು.

ಬೇಡ ಸಾಕು ಇಷ್ಟೆ. ಇನ್ನೂ ಬರೆಯುತ್ತ ಹೋದರೆ ಕೃಷಿ, ಕೃಷಿಕನ ಬಗ್ಗೆ ಸಾವಿರ ಸಾವಿರ ನುಡಿಗಳು ಕಂಡಾವು ಆದರೆ....

ಯುವ ಸ್ನೇಹಿತರೆ, ಇಂದು ಕೃಷಿಕ ಯಾಕೆ, ಆರ್ಥಿಕ ದೌರ್ಭಿಕ್ಷ್ಯ ಅನುಭವಿಸುತ್ತಿದ್ದಾನೆ. ಈ ದೇಶದ ಬೆನ್ನೆಲುಬು ಮುರಿದು ಯಾಕೆ ಯಮಯಾತನೆಯಲ್ಲಿ ಮುಳುಗಿದೆ. ಅನ್ನ ಉಂಡವನು ಸುಖೀಭವನಾಗಿರಬಹುದು. ಅನ್ನದಾತ ದುಃಖದಲ್ಲಿ ಅದ್ದಿ ಹೋಗಿದ್ದಾನೇಕೆ? ದೇಶದ ಅಸಡ್ಡಾಳ ಕೃಷಿ ನೀತಿಯ ಸರ್ಕಾರಗಳು ಒಂದು ಕಾರಣ. ಬಿ.ಎಸ್ಸಿ, ಅಗ್ರೀ, ಎಂ.ಎಸ್ಸೀ ಅಗ್ರೀ ಕಲಿತು ಗುಡ್ಡೆ ಹಾಕಿದ ನಮಗೇಕೆ 'ಪೇಪರ್‌ವೇಯ್ಟ್' ಆಡಿಸುತ್ತಾ ಕೆಂಪು ಶಾಯಿಯಲ್ಲಿ ಗುರುತು ಹಾಕುವ ಮೇಜು ಖುರ್ಚಿಗಳ ಮೇಲೆ ವಿಪರೀತ ಪ್ರೀತಿ...! ?

ಎಲ್ಲೇ ಕುಳಿತಿರಲಿ ನಾವು ತಿನ್ನುವುದು ಜೋಳ, ಅದೇ ಅಕ್ಕಿ, ರಾಗಿ, ಗೋಧಿ, ಸಜ್ಜೆಯೇ ಅಲ್ಲವಾ ? ಕುಡಿಯುವುದು ಅದೇ ಗೋಕ್ಷೀರ, ಎಮ್ಮೆ ಹಾಲಿನ ಕೆನೆ ಮೊಸರು ; ಹರಳು ತುಪ್ಪ, ಬಂಗಾರದುಂಡೆಯಂತ





# ಧರಣಿಯ ಒಡಲಿಗೆ ಜಲ ಮರುಪೂರಣ

–ಸುಲೋಚನಾ ಶಿರಸಿ



**ಬನವಾಸಿ ಸಮೀಪದ ಹುಲೇಮಳಗೆಯಂತ ಪುಟ್ಟಗ್ರಾಮ "ಜಲಸಾಕ್ಷರತಾ" ಆಂದೋಲನದಿಂದ ನೀರಿನ ಸಮಸ್ಯೆ ಇಲ್ಲವಾಗಿಸಿಕೊಂಡಿದೆ. ಅಲ್ಲಿ ಊರ ಹುಡುಗರೆಲ್ಲಾ ಸೇರಿ ಸುಮಾರು '600 ಎಕರೆ' ಪ್ರದೇಶದಲ್ಲಿ ಇಂಗುಗುಂಡಿಗಳನ್ನು ತೋಡಿ "ಜಲಮರುಪೂರಣ" ದಂತಹ ಅದ್ಭುತ ಕಾರ್ಯವನ್ನು ಮಾಡಿ ಪ್ರಕೃತಿಗೆ ತಮ್ಮ ಋಣ ಸಂದಾಯವನ್ನು ಮಾಡುತ್ತಿದ್ದಾರೆ. ಏನಿದು ಜಲಮರುಪೂರಣ? ವಿವರಿಸಿದ್ದಾರೆ ಸುಲೋಚನಾ.**

**ಭೂ**ಮಿಯ ಸಕಲ ಚರಾಚರ ಜೀವಿಗಳಿಗೂ ಬದುಕೆಂದರೆ ನೀರು. ನೀರಿನ ಆಸಕ್ತಿಯಿಲ್ಲದೆ ಜೀವನ ಅಸಾಧ್ಯ. ಇತ್ತೀಚೆಗೆ ಅವ್ಯಾಹತವಾಗಿ ಕಾಡನ್ನು ಕಡಿದು ನಾಡನ್ನಾಗಿಸುವ ನಗರೀಕರಣದ ದುರಾಸೆ, ಮನುಕುಲಕ್ಕೆ ಮಾರಕವಾಗುತ್ತಿದೆ. ಮರಗಿಡಗಳನ್ನು ಕಡಿಯುವುದರಿಂದ ಮಳೆ ನೀರಿನೊಂದಿಗೆ ಭೂಮಿಯ ಮೇಲ್ಮೈಪದರ ಕೊಚ್ಚಿಹೋಗಿ ಫಲವತ್ತತೆ ಕಡಿಮೆಯಾಗಿ ಆ ಜಾಗದಲ್ಲಿ ಹುಲ್ಲು, ಸಸ್ಯಗಳೂ ಕೂಡ ಹುಟ್ಟುವುದಿಲ್ಲ. ಅಲ್ಲದೆ ಬಿದ್ದ ಮಳೆ ನೀರಿನ ಒಂದಂಶವೂ ಭೂಮಿಯೊಳಗೆ ಇಂಗದೆ ಅಂತಃರ್ಜಲದ ಮಟ್ಟ ಕುಸಿಯುತ್ತಿದೆ. ಬರ ಎದುರಾಗುವ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ವರ್ಷದಿಂದ ವರ್ಷಕ್ಕೆ ನೀರಿನ ಸಮಸ್ಯೆ ಹೆಚ್ಚಾಗುತ್ತಿದೆ. ನೀರಿನ ಸಮಸ್ಯೆ ನೀಗಬೇಕಾದರೆ ಅಂತಃರ್ಜಲದ ಮಟ್ಟ ಏರಬೇಕು. "ಜಲ ಮರುಪೂರಣಕ್ಕೆ" ಯಾವ ವಿಧಾನವಿದೆ? ಅದರಲ್ಲಿ ನಮ್ಮ ಪಾತ್ರವೇನು? ಎಂದು ತಿಳಿದುಕೊಳ್ಳಬೇಕು.

"ಮಳೆನೀರಿನ ಕೊಯ್ಲು" ಬದುಕುವ ಆಸೆಯನ್ನು ಹೆಚ್ಚಿಸುವ ವಿದ್ಯೆ ಬೀಳುವ ಮಳೆನೀರು ಭೂಮಿಗೆ ಸೇರಬೇಕಾದರೆ ಅದಕ್ಕೆ ತಡೆಬೇಕು. ಕಾಡು ಇದ್ದರೆ, ಮರಗಿಡಗಳಿದ್ದಲ್ಲಿ ಬೀಳುವ ಮಳೆನೀರು ಅಲ್ಲೇ ಮಣ್ಣಿನೊಳಗೆ ಸೇರುತ್ತದೆ. ಬೋಳು ಗುಡ್ಡಗಾಡು ಪ್ರದೇಶದಲ್ಲಿ ಬೀಳುವ ನೀರು ಹರಿದು ಕೆರೆಗೋ, ಹೊಳೆಗೋ, ಸೇರುವುದು. ಆದರೆ ಮಳೆನೀರ ಒಂದಂಶ ಕೆರೆ, ಹೊಳೆ ಸೇರಿದರೆ ಇನ್ನೊಂದಂಶ ನಿಧಾನವಾಗಿ ಭೂಮಿಯೊಳಗೆ ಇಳಿದರೆ ಮಾತ್ರ ಅದು ಅಂತಃರ್ಜಲವಾಗುತ್ತದೆ. ಅಂತರ್ಜಲದ ಮಟ್ಟ ಏರಿದರೆ ಮಾತ್ರ ಮಳೆ, ಬೆಳೆ, ಬದುಕು ಎಲ್ಲಾ.

ಇಳಿಜಾರು ಪ್ರದೇಶಗಳಲ್ಲಿ ನೀರು ಎಲ್ಲಿ ಜಾಸ್ತಿ ಹರಿಯುತ್ತದೆಯೋ ಅಲ್ಲಿ "ಇಂಗುಗುಂಡಿ" ನಿರ್ಮಿಸಬಹುದು. ಅಕ್ಕ, ಪಕ್ಕ ಹುತ್ತವಿದ್ದರೂ ಅದಕ್ಕೆ ನೀರನ್ನು ತಿರುಗಿಸಿ ಬಿಡಬಹುದು. ಇದರಿಂದ ನೀರು ನಿಧಾನವಾಗಿ

ಬರಹಗಾರನ ಬದುಕು ಮತ್ತು ಬರಹದ ಬಗೆಗಿನ ಚರ್ಚೆ ಮೊದಲಿನದು. ಬದ್ಧತೆಯಿರದ ಬರಹ ಎಂದಿಗಿದ್ದರೂ ನಿಃಶಕ್ತ, ಮತ್ತು ಅದು ನೈತಿಕ ಬಲವನ್ನು ಉಳಿಸಿಕೊಳ್ಳುವಲ್ಲಿ ಸೋಲುತ್ತದೆ ಎಂಬಲ್ಲಿಂದ ಆರಂಭಿಸಿ, ಬರಹ ಮತ್ತು ಬರಹಗಾರನ ಬದುಕಿನ ಮಧ್ಯೆ ಸಾಮ್ಯತೆ ಎಷ್ಟರಮಟ್ಟಿಗೆ ಅಪೇಕ್ಷಣೀಯ ಎಂಬ ವಿಚಾರದವರೆಗೆ ಹರವು ಪಡೆದುಕೊಂಡು ವಿಸ್ತೃತ ವಿಷಯ ಇದು. ಬರಹಕ್ಕೆ ಒಂದು ಸಾಮಾಜಿಕ ಬದ್ಧತೆ ಇರಬೇಕಾದುದು ಅಗತ್ಯವಾದರೂ, ಬರಹಗಾರನ ಬದುಕು ಆತನ ಬರಹದೊಂದಿಗೆ ಎಲ್ಲ ಕೋನಗಳೊಂದಿಗೆ ಸಮೀಕರಣಗೊಳ್ಳಲೇಬೇಕೆಂಬ ಹೇರುವಿಕೆ ಸರಿಯಲ್ಲ ಎಂಬ ವಿಷಯಕ್ಕೆ ಎಲ್ಲರ ಸಹಮತ ದೊರಕುತ್ತಿದ್ದಂತೆ ಇನ್ನೊಂದು ಹೊಸ ವಿಷಯದೆಡೆಗೆ ಚರ್ಚೆ ಹೊರಳಿತು.

ಸಾಹಿತ್ಯ ಮತ್ತು ಸಮಾಜ ಏಕವೋ ಭಿನ್ನವೋ ಅನ್ನುವ ವಿಷಯವನ್ನಾಧರಿಸಿದ ಚರ್ಚೆ ಚೇತೋಹಾರಿಯಾಗಿತ್ತು. ಸಾಹಿತ್ಯವೆಂಬುದು ಸಮಕಾಲೀನ ಸಮಾಜದ ಪ್ರತಿಮೂರ್ತಿ ಎಂಬ ಸತ್ಯದ ಹಿನ್ನೆಲೆಯಲ್ಲಿಯೇ, ಸಾಹಿತ್ಯ ಮತ್ತು ಸಮಾಜಗಳೆರಡೂ ಒಂದೇ ಎನ್ನಲೂ ಸಾಧ್ಯವಿಲ್ಲ ಎಂಬ ದ್ವಿಮುಖ ಸತ್ಯದ ಎದುರು ಈ ಚರ್ಚೆ ಸಂಪನ್ನವಾಯ್ತು. ಬರಹಗಾರನಿಗೆ ಇರಬೇಕಾದ ಸಾಮಾಜಿಕ ಬದ್ಧತೆಯನ್ನಾಧರಿಸಿದ ಚರ್ಚೆಯೂ ಮುಗಿವಾಗ ಭೋಜನದ ಸಮಯವಾಗಿತ್ತು.

ಆಹ್ಲಾದಮಯ ಸಹಭೋಜನದ ಸವಿಯುಂಡು ತೃಪ್ತವಾದ ಉದರ ಮತ್ತು ಮನಸುಗಳಿಗೆ ಕೊಂಚ ವಿರಾಮ. ಅದೇ ವಿರಾಮದಲ್ಲಿ ಬೇಂದ್ರೆ ಬದುಕಿನ ಚಿತ್ರವನ್ನು ವಿವರಿಸುವ ಸಾಕ್ಷ್ಯ ಚಿತ್ರ ಪ್ರದರ್ಶಿತವಾಯ್ತು. ಅದಕ್ಕಿಂತ ಮುಖ್ಯವಾಗಿ ಸಮಾಜ ಸೇವಕರ ಸಮಿತಿಯ ಮಿತ್ರರೆಲ್ಲರ ಶ್ರಮದಿಂದ ರೂಪಗೊಂಡ ಡಿ.ವಿ.ಜಿ.ಯವರ ಕುರಿತಾದ ಸಾಕ್ಷ್ಯ ಚಿತ್ರ ಪ್ರದರ್ಶಿತವಾದದ್ದು ಅವಿಸ್ಮರಣೀಯ ಸಂಗತಿ. ಅದೊಂದು ಚಿತ್ರವಾಗಿ ಮೈದಾಳಿದ ಕನಸು. ಇದರ ಬಳಿಕದ್ದು ಪತ್ರಿಕೆಯ ಬಗೆಗಿನ ಪ್ರಶ್ನೆಗಳಿಗೆ ಸಂಪಾದಕರ ಉತ್ತರದ ಅವಧಿ. ಅದೂ ಒಂದು ವ್ಯಾಪಕ ಚರ್ಚೆಯಾಗಿದ್ದು ಸ್ವೀಕರಣೀಯ ವಿಷಯ. ಇದಿಷ್ಟು ಮುಗಿಸುವ ಹೊತ್ತಿಗೆ ಸಂಜೆಯಾವರಿಸುತ್ತಿತ್ತು. ಫೋಟೋ ಸೆಶನ್‌ಗೆ ಮುಖವೊಡ್ಡಿ ಮುಗಿದ ಮರುಕ್ಷಣ ಮನೆ ಸೇರುವ ಧಾವಂತ, ವಿಯೋಗದ ನೋವು. ಉಡಿ ತುಂಬಿಕೊಂಡ ಆನಂದದ ಸಿಹಿ, ಇನ್ನಿಂಥ ಮಿಲನ ಎಂದಿಗೋ ಎಂಬ ಭಾವ ಎಲ್ಲರಲ್ಲಿ ಇಣುಕುತ್ತಿದ್ದವು.

ಹಾಡು, ಚರ್ಚೆ, ಪರಿಚಯ ವಿನಿಮಯ, ಒಟ್ಟಾಗಿ ಕೂತು ಊಟ ಮಾಡಿದ, ಮಾತಾಡಿದ, ಸಂಭ್ರಮಿಸಿದ ಆ ಕ್ಷಣಗಳನ್ನಿತ್ತ ಚೈತ್ರರಶ್ಮಿಯೆಂಬ ಒಟ್ಟು ಪರಿಕಲ್ಪನೆಗೆ ಎಲ್ಲ ಮನಸುಗಳ ಚಿರಂತನ ಹಾರೈಕೆಗಳಿವೆ, ಕೃತಜ್ಞತೆಗಳಿವೆ. ಉತ್ತರ ಕನ್ನಡದ ಈ ಮಿಲನ, ರಶ್ಮಿಯ ಹೆಮ್ಮೆ. ಬೆಳಗಿನಲ್ಲಿ ಒಂದುಗೂಡಿದ್ದ ಸಮಾನ ಮನಸ್ಕ ಹಕ್ಕಿಗಳೆಲ್ಲ ಮತ್ತೆ ತಮ್ಮ ತಮ್ಮ ಗೂಡಿಗೆ ಮರಳಿ ಹೊರಟು ನಿಂತಾಗ ಮನಸಿನ ತುಂಬ ಆರ್ದ್ರತೆಯ ಜಿನುಗು. ಇವತ್ತಿಗೆ ಅದೊಂದು ಸವಿಯೂಡುವ ನೆನಕೆಯಷ್ಟೆ.

**ಕುಟುಕು**

**ಗ**

**ಟು**

ಉದರ ನಿಮಿತ್ತವಾದ
ಬಹುಕೃತ ವೇಷಕ್ಕೆ
ನನ್ನ ಬೆಂಬಲವಿಹುದು
ಆದರೆ,
ಸ್ವಯಂಕೃತ ವಿಕಾರಕ್ಕೆಲ್ಲ
ಉದರ ನಿಮಿತ್ತವೆನ್ನುವುದು
ದ್ರೋಹವಹುದು.

ಕವಿತನ
ತಾಯ್ತನದಂತೆ,
ಪ್ರೀತಿಯಿಂದ ಹೊತ್ತು ಹೆತ್ತ
ಕವಿತೆ, ಅವನ ಕೂಸು.
ಹೆತ್ತ ಕವಿಗೆ
ಕವಿತೆ ಮುದ್ದು...

**– ವಿಶ್ವನಾಥ ಸುಂಕಸಾಳ**





ಬೆಣ್ಣೆ ಅಲ್ಲವಾ ? ಆದರೆ ನಮಗ್ಯಾಕೆ ಸಗಣಿ ಅಂದರೆ ವಾಕರಿಕೆ? ಗೋಮೂತ್ರವೆಂದರೆ ಹೇಸಿಗೆ? ದನಗಾಹಿತನವೆಂದರೆ ಹೇಳಲಾರದ ಮಡಿವಂತಿಕೆ ಏಕೆ? ಇಷ್ಟೆಲ್ಲ ಅಸಹ್ಯಪಟ್ಟು; ತಿನ್ನುವುದು ಉಣ್ಣುವುದು ಬಿಟ್ಟಿದ್ದೇವಾ ? ನಾಚಿಕೆಯಾಗಬೇಡವಾ ನಮಗೆ... ಸುಂದರ ಆಕಾರಕ್ಕೆ ಕೆತ್ತಿಟ್ಟ ಉಗುರೊಳಗೆ ಕೆಸರು ಸೇರದಷ್ಟು ಅನಗತ್ಯ ಜಾಗೃತರಾಗಿ ಪೊರಕೆ ಕಡ್ಡಿಯಿಂದ ಗೊಬ್ಬರ ಬೆದಕುವ ನಾವು ಕಲಿತದ್ದು ಯಾವ ಪುರುಷಾರ್ಥಕ್ಕೆ !? ಓದಿ ಓದಿ ಕೂಚಂಭಟ್ಟರಾಗಿ ಬಿಟ್ಟೆವೆಂದೇ ಹೇಳಬೇಕಾಗುತ್ತದೆ.

ಈ ದೇಶದಲ್ಲಿ ಕಲಿತವನು ಮತ್ತೆ ಮಣ್ಣನ್ನು ಪೂಜ್ಯಭಾವದಿಂದ ನೋಡಿದ್ದು ಕಡಿಮೆ. ಹುಡುಕಿದರೆ ವಿರಳಾತಿ ವಿರಳರಾಗಿ ಬೆರಳೆಣಿಕೆಯಷ್ಟು ಜನ ಸಿಕ್ಕಾರು. ತರಕಾರಿಗೆ ಸಿಕ್ಕಾಪಟ್ಟೆ ಬೆಲೆ, ದಿನಸಿ ಕಿರಾಣಿಗಳು ತುಟ್ಟಿ ಎಂದು ಬಿಸಿಯಾದ ಮಂಡೆಯನ್ನು ಮತ್ತಷ್ಟು ಹಿಸುಕಿಕೊಂಡಿದ್ದೇವೆಯೇ ವಿನಃ ಯಾಕೆ ಬೆಲೆ ಹೆಚ್ಚಾಗುವ ಪ್ರಸಂಗ ಬಂತು, ರೈತನಿಗೂ ಅಗತ್ಯತೆಗಳಿವೆ, ಅವನು ಇದ್ದಷ್ಟು ಹೀನ ಸನ್ನಿವೇಶದಲ್ಲಿ ನಾವ್ಯಾರೂ ಇಲ್ಲ ಎಂದೇಕೆ ನಾವು ಆಲೋಚಿಸುವುದಿಲ್ಲ.

ನಮಗೆಲ್ಲರಿಗೂ ಗೊತ್ತು ಮಣ್ಣಿನ ಆಪ್ಯಾಯಮಾನ ಘಮಲನ್ನು, ಅದು ಎಬ್ಬಿಸುವ ಪುಳಕವನ್ನು ಯಾವುದೋ ದೊಡ್ಡ ಇಡಗಂಟಿನ ಭ್ರಮೆಗೆ ಸಿಲುಕಿ ನಾನು, ನನ್ನದು ಎನ್ನುತ್ತ ಧಿಕ್ಕರಿಸಿ ಬಂದವರು ನಾವು. ಭೂಮಿಯೇ ಇಲ್ಲದವ ಬದುಕು ಅರಸಿ ಬಣ್ಣದ ಪಟ್ಟೆಗಳ ಪಟ್ಟಣಕ್ಕೆ ಬಂದು ನೆಲೆನಿಂತರೆ ಅದು ಬೇರೆಮಾತು. ಅನ್ನಕೊಡುವ ಧರಣಿಯಿದ್ದೂ ಒದ್ದುಬಂದ ನಮ್ಮ ಸೊಕ್ಕು ಎಷ್ಟಿರಬೇಡ...!?

ಯಾಕೆ ಈ ಪ್ರಶ್ನೆಯೆಂದರೆ ಈಗೀಗ ವಾರದ ರಜಾ ಸಿಕ್ಕರೆ ಸಾಕು ಹಸಿರನ್ನೋ, ನಿರ್ಮಲ ಮಣ್ಣಿನ ವಾಸನೆಯನ್ನೋ ಹುಡುಕಿಕೊಂಡು, ಉಸಿರಾಡಲು ಸ್ವಚ್ಛಗಾಳಿ, ತಿನ್ನಲು ಸಾವಯವ ಆಹಾರ ಹುಡುಕಿಕೊಂಡು ಊರು, ಪರಊರು ಅನ್ನುತ್ತ ನೂರೋ, ಸಾವಿರವೋ ಹರದಾರಿ – ಯೋಜನಗಳನ್ನು ದಾಟಿ ಹೋಗುವ ನಮ್ಮನ್ನು ಕಂಡರೆ, ರಟ್ಟೆ ಮನಸ್ಸು ಎರಡೂ ಸೋಲುವಂತೆ ದುಡಿದು ಹಣ್ಣಾಗಿ, ಕುಳಿತು, ದೇಕರಿಸುವವರಿಲ್ಲದೇ ಕೊಳೆತು ಹೋಗುತ್ತಿರುವ ಕೃಷಿಕನಿಗೆ ಹಾಗನಿಸದೆ ಇದ್ದೀತೆ ?

ಇಷ್ಟೆಲ್ಲ ಸಾಹಿತ್ಯ, ಕಲೆ, ಕುಣಿತ, ಸಂಘಟನೆ, ವೈದ್ಯ, ಅಭಿಯಂತರ, ವಿಮಾನ ಚಾಲಕ, ಆರ್ಥಿಕ ತಜ್ಞ, ಷೇರು ಹೂಡಿಕೆದಾರ, ಬಂಡವಾಳ ತಜ್ಞ, ಕಾಫಿ ಕೆಫೆ ಮಾಲೀಕ, ವ್ಯಾಪಾರ, ವಹಿವಾಟುದಾರ, ನೃತ್ಯಗಾತಿ, ಗಾಯಕಿ, ಗಣಿತಜ್ಞ ಹೀಗೆ ಇತ್ಯಾದಿ ಎಲ್ಲ ಭ್ರಮಾಧೀನ ಸುಖಸಂಪದಗಳ ಬಗ್ಗೆ ಗೌರವ ಡಾಕ್ಟರೇಟ್ ತೆಗೆದುಕೊಳ್ಳುವಷ್ಟು ಕೊಚ್ಚುವ ನಾವು, ಅಸಲಿಗೆ ತಿನ್ನುವ ಅನ್ನ ಬಂದ ಮೂಲದತ್ತ ಅರೆ ಘಳಿಗೆ ಯೋಚಿಸಿದ್ದೇವಾ ? ಮೈ ಬಗ್ಗಿಸಿ ದುಡಿಯುತ್ತಲೇ ಹಲವೆಂಟು ಮಾನಸಿಕ ಒತ್ತಡಗಳಿಗೆ ಈಡಾಗುತ್ತಲೇ ರಕ್ತವನ್ನು ಬೆವರಾಗಿ ಗುತ್ತುವ, ಬಸಿಯುವ 'ಮಣ್'ಮಗನನ್ನು ಎಂದಾದರೂ ವಿದೇಶಾಂಗ ಸಚಿವನಷ್ಟೇ ನೀನು ಮೇಲ್ಮಟ್ಟದವ ಅಂದಿದ್ದೀವಾ? ಅವನು ಯಾವ ಪರಿ ಬೆವರನ್ನು ಹನಿಯುತ್ತಾನೆ ಎಂಬುದು ಗೊತ್ತಿಲ್ಲದ ನಾವು ಅವನನ್ನು ಹೇಗೆ ಆ ಮಟ್ಟದಲ್ಲಿ ಕಲ್ಪಿಸಿಕೊಂಡೇವು.

ನಮ್ಮ ಮಕ್ಕಳನ್ನು ಮುಂದೆ ನೀನೇನು ಮಾಡ್ತೀಯಾ ಪುಟ್ಟಾ ಎಂದು ಕೇಳಿದಾಗ ಆ ಮಕ್ಕಳು ಮುದ್ದಾಗಿ ಡಾಕ್ಟರು ಆಗ್ಬೇಕು ಅಂತಿದಿನಿ, ನಾನು ಪೈಲಟ್ ಆಗ್ಬೇಕು, ನಾನು ಸಿಂಗರ್ ಆಗ್ಬೇಕು, ನಾನು ಫಾರ್ಮುಲಾ ರೇಸರ್ ಆಗ್ಬೇಕು ಹೀಗೆ ಕನಸನ್ನು ಬಿಚ್ಚಿಕೊಳ್ಳುತ್ತವೆಯೇ ಹೊರತು, ಒಂದು ಮಗುವೂ ಅನ್ನದಾತನಾಗ್ಬೇಕು ಅಂತ ಹೇಳುವುದಿಲ್ಲ. ಅದು ಮಗುವಿನ ತಪ್ಪಲ್ಲ. ಅದು ತಾಯಿ ಗರ್ಭದಲ್ಲಿದ್ದಾಗಲೇ ಸೆರಿಲ್ಯಾಕ್, ಸ್ಟ್ರಾಬೆರಿ, ಪೀಚ್‌ಬಟರ್, ಮೈಕೆಲ್ ಜಾಕ್ಸನ್, ಟಾಲ್‌ಸ್ಟಾಯ್, ತೆಂಡೂಲ್ಕರ್, ಚಂದ್ರಯಾನ, ಮಂಗಳನಂಗಳ ಅಂತ, ಹುಕಿ ತುಂಬುವವರು ನಾವು. ನೋಡಿ ಅಲ್ಲೆಲ್ಲಾದರೂ ಜೋಳದ ತೆನೆ, ರಾಗಿ

ಅಂಬಲಿ, ನುಚ್ಚಕ್ಕಿ ಗಂಜಿ, ಗೊಲ್ಲನ ಕಥೆ, ಮಣ್ಣಿನ ಕಂಪು, ಸುಗಂಧ ಸುಮಗಳ ಸುವರ್ಣ, ಆಕಳಿನ ಅಂಬಾ ಕಾಣುತ್ತದೆಯೇ, ಕೇಳುತ್ತದೆಯೇ ನೋಡಿ, ಸುತಾರಾಂ ಆಗಲಿಕ್ಕಿಲ್ಲ. ದುರಂತವೆಂದರೆ ನಾವ್ಯಾರು ಪುಟ್ಟ ನೀನು ಕೃಷಿಕ ಯಾಕಾಗಲ್ವೋ ಅಂತ ತಮಾಷೆಗೂ ಕೇಳುವುದಿಲ್ಲ. ಆ ಪರಿ ನೆಲಮೂಲ ಮರೆತ ಒಣ ಪ್ರಭೃತಿಗಳಾಗಿ ಬಿಟ್ಟಿದ್ದೇವೆ. ಮಹಾವಿಷಾದವೆಂದರೆ ರೈತರ ಮಕ್ಕಳೂ ಈ ಭಾವ ತೊರೆದಿದ್ದಾರೆ. ನೊರೆಹಾಲಿನ ಆಗತಾನೆ ಸೊರೆಸಿ ಕರೆದ ನರುಗಂಪು ನೊರೆಗಿಂತ, ತಣ್ಣಗೆ ಹೊಟ್ಟೆಯಲ್ಲಿ ಹುಳ ಮಿಳಕಿಸುವ 'ಕೆಫೆಚಿನೋ'ದ ಅರೋಮಾ ನಮ್ಮ ಮೈ ನವಿರೇಳಿಸುತ್ತದೆ ಎಂದಾದಲ್ಲಿ ನೆಲಮೂಲ ಮರೆತು ಎಷ್ಟು ಗಾವುದ ಬಂದುಬಿಟ್ಟಿದೇವೆ ಅಂತ ಅನ್ನಿಸುತ್ತದೆ, ದಿಗಿಲಾಗುತ್ತದೆ.



***ನಾವ್ಯಾಕೆ ಮಣ್ಣು ಮರೆತ ಬಣ್ಣಗೇಡಿಗಳಾಗಿದ್ದೇವೆ? ಬದುಕನ್ನು ಒಂದು 'ಫ್ಯಾಶನ್' ಎಂಬಂತೆ ಬದುಕಬೇಕು ಎಂಬ ಭರದಲ್ಲಿ ನಿಂತ ನೆಲ ಒದೆಯುವ, ತಾಯಿ ಎದೆ ಬಗೆಯುವ ಭಂಡತನವೇಕೆ? ಗಣಕಯಂತ್ರದ ಚಿಪ್ಪನ್ನೋ, ಮೌಸನ್ನೋ, ಸೂಕ್ಷ್ಮ ತಂತ್ರಾಂಶಗಳನ್ನು ಮುರಿದು ತಿನ್ನಲಾದೀತಾ, ತಿಂದು ಹೊಟ್ಟೆ ತಣಿಸಲಾದೀತಾ?***

***ಇನ್ನೂ, ಬಹುಕಾಲ ಈ ದೇಶದ ಮಣ್ಣಿನ ಮಗ ಏನಯ್ಯ ಬೋರ, ಅನ್ನಿಸಿಕೊಂಡಿರಲಾರ.***

ಇನ್‌ಕಂಟ್ಯಾಕ್ಸ್‌ನವರ ಸೈರನ್ ಮೊಳಗಿದಾಕ್ಷಣ ಆದಾಯ ತೆರಿಗೆ ತಪ್ಪಿಸಲು ಜಮೀನು ಖರೀದಿಗೆ ಉಟ್ಟಬಟ್ಟೆಯಲ್ಲಿ ಓಡುತ್ತೇವೆ. ಆ ಜಮೀನನ್ನೂ ಮಣ್ಣು ಮುಟ್ಟಿ ಗೊತ್ತಿದ್ದವನ ಸುಪರ್ದಿಗೊಪ್ಪಿಸಿ ಪಾಲಿಷ್ಟು ಅಂತ ಹರ್ಕೊಂಡುಬಿಡುತ್ತೇವೆ. ಪರರ ಭೂಮಿಯಲ್ಲಿ ಬಂಗಾರ ಬೆಳೆಯುವ ದರ್ದು ಪಾಲಿಗೆ ಮಾಡುವವನಲ್ಲಿ ಇರುವುದಿಲ್ಲ. ಬೀಳುಬೆಳೆಯದಿದ್ದರೆ ಅದೇ ಪುಣ್ಯ.

ಬೆಂಗಳೂರಿನಲ್ಲಿ ಬಾಲ್ಯದ ನೆನಪಿಗೆ ಚವಳು ನೀರು ನುಂಗುತ್ತ, ಪಾಶೆ ತಡಯಲಾಗದೇ ಇಪ್ಪತ್ತೈದು, ಮೂವತ್ತು ರೂಪಾಯಿಕೊಟ್ಟು ತೆಂಗಿನಕಾಯಿ ಗಾತ್ರದ ಮಗೇಕಾಯಿ, ಐವತ್ತೋ, ನೂರೋ ಕೊಟ್ಟು ದೊಡ್ಡಗಾತ್ರದ ಹಲಸಿನ ಕಾಯಿ ತೊಳೆ (ಸೊಳೆ) ಖರೀದಿಸುತ್ತೇವೆ. ಮಗೇಕಾಯಿ ಕೋಟೆ, ಹಲಸಿನ ಮೇಣ, ಇಬ್ಬುಡಲೆ (ಮೆಕ್ಕೆ) ಹಣ್ಣಿನ ಬಳ್ಳಿ ಎಲ್ಲ ಮರೆತ ನಾವು ಬೆಲೆ ತೆತ್ತಿದ್ದಕ್ಕೆ ಬೈದುಕೊಂಡು ಗುಳುಂಕರಿಸುತ್ತೇವೆ. ಸಾಲದ್ದಕ್ಕೆ ಪುಗಸಟ್ಟೆ ಸಿಗ್ತಿತ್ತು ನಮ್ಮೂರಲ್ಲಾದ್ರೆ ಎಂಬ ವಗ್ಗರಣೆ ಬೇರೆ. ವಿನಾ ಮೂಲದತ್ತ ಅಪ್ಪಿತಪ್ಪಿಯೂ ಯೋಚಿಸುವುದಿಲ್ಲ. ತಳ್ಳುಗಾಡಿಯಲ್ಲಿ ತರ್ಕಾರಿ ಕೊಳ್ಳುತ್ತಿದ್ದ ನಾವು ಆ ಪಡಪೋಶಿಗೆ ಕಿಲುಬುಕಾಸಾದರೂ ಹುಟ್ಟುವಂತೆ ಮಾಡುತ್ತಿದ್ದೆವು. ವಾಲ್‌ಮಾರ್ಟ್, ಬಿಗ್ ಬಝಾರ್‌ಗಳಲ್ಲಿ ನಮಗೆ ಬೇಕಾದ್ದೇನೋ ಸಿಗುತ್ತದೆ. ಆದರೆ ಕೊಂಡು ತಿಂದರೆ ತೆತ್ತದುಡ್ಡಿಗೆ ನಮ್ಮ ಹೊಟ್ಟೆಯಲ್ಲೂ ಉರಿ, ಪಡಪೋಶಿ ತಳ್ಳುಗಾಡಿಯವನಿಗೂ ತಣ್ಣೀರ ಗಡಿಗೆ, ಇತ್ತ ರೈತನಿಗೂ ಚಿಪ್ಪು ಈ ಬಝಾರ್‌ಗಳವರು ರೈತನಿಗೆ ಕೈತುಂಬ ಕಿಸೆ ತುಂಬ ಕೊಟ್ಟಿರುತ್ತಾರೆ ಅಂತ ನಾವು ನಂಬಿದರೆ ಅದು ದಡ್ಡತನ. ಅವರು ತಮ್ಮ ವೈಭವೋಪೇತ ನಿಸ್ಸಾರ ಬಝಾರ್‌ಗಳಲ್ಲಿ ನಿರ್ವಹಣಾ ವೆಚ್ಚ ಅಧಿಕ ಎಂದು ಕಿಲುಬುಕಾಸಿಗೂ ಕಡಿಮೆ ಕೊಟ್ಟು ಖರೀದಿಸಿರುತ್ತಾರೆ.

ಹೇಳಿದ ಬೆಲೆಗೆ ಥರಹೇವಾರಿ ಹಣೆಪಟ್ಟಿಯ ಎಣ್ಣೆಯಂಥ ತುಪ್ಪ ಖರೀದಿಸಿ ತಥ್ ಎನ್ನುತ್ತೇವೆಯೇ ವಿನಃ ಶುದ್ಧ ಹಳ್ಳಿ ಸೊಗಡಿನ ತುಳಸಿದಳ ನೆನೆಸಿಟ್ಟ ಪರಿಮಳ ಸೂಸುವ ಹರಳು ತುಪ್ಪ ಖರೀದಿಸಲಾರೆವು. ಹಳ್ಳಿಯವರು ಬೆಲೆ ಹೆಚ್ಚು ಹೇಳುತ್ತಾರೆ ಎಂಬ ಅಪವಾದ ಬೇರೆ, ಮಾರುಕಟ್ಟೆಯಲ್ಲಿ ೨೦೦ ರೂ.ಗಳಿಗೂ ಮಿಕ್ಕ ಬೆಲೆಯಲ್ಲಿ ಬಿಕರಿಯಾಗುವ 'ಕಂಪನಿ' ತುಪ್ಪಗಳಿಗಿಂತ ಹಳ್ಳಿ ತುಪ್ಪಗಳು ಐದುಪಟ್ಟು ಶುದ್ಧವೂ,





# ಸ್ವರ್ಣ ಮಿಲನದ ಮೆಲುಕು

**ಶಿರಸಿಯಲ್ಲಿ ನಡೆದ ಚೈತ್ರರಶ್ಮಿಯ ೫೦ನೇ ಸಂಚಿಕೆ ಬಿಡುಗಡೆ ಹಾಗೂ ಬಳಗದ 'ಸ್ನೇಹಮಿಲನ' ಕಾರ್ಯಕ್ರಮದ ಸಂಭ್ರಮದ ಕ್ಷಣಗಳನ್ನು ಅನಾವರಣಗೊಳಿಸಿದ್ದಾರೆ ನವೀನ್.**

**– ನವೀನ್ ಭಟ್ ಗಂಗೋತ್ರಿ, ಶೃಂಗೇರಿ**



ಅದೊಂದು ಸಂಭ್ರಮದ ಬೆಳಗು. ಚೈತ್ರರಶ್ಮಿ ಎಂಬ ಹಣತೆಯ ಐವತ್ತನೆಯ ಆವರ್ತನೆಯ ಸಂಭ್ರಮಕ್ಕೆ ಸಾಕ್ಷಿಯಾಗಲು ಮುನ್ನಾ ದಿನದ ಮಳೆಯಲ್ಲಿ ಮೈ ತೊಳೆದುಕೊಂಡಿದ್ದ ಮೇ ತಿಂಗಳ ೧೭ನೇ ತಾರೀಖಿನ ಬೆಳಗು.

ಮಲೆನಾಡಿನ ಮಡಿಲಂತಹ ಶಿರಸಿಯಲ್ಲಿ, ಸಂಚಿಕೆಯ ಐವತ್ತರ ಸಂಭ್ರಮಕ್ಕೆ ವೇದಿಕೆ ತೆರೆದುಕೊಂಡಿತ್ತು. ಉತ್ತರ ಕನ್ನಡ ಬಳಗದ ಆಹ್ವಾನಕ್ಕೆ ಬೆಂಗಳೂರಿನ ಮಿತ್ರರು ಜೊತೆಯಾಗಿದ್ದರು. ಎಲ್ಲ ಮಿತ್ರರೂ ಓಗೊಟ್ಟು ಒಟ್ಟಾಗಿ, ಬೆಳಗಿನ ಉಪಹಾರ ಮುಗಿಸಿ ಸಭಾ ಕಾರ್ಯಕ್ರಮ ಶುರುವಿಟ್ಟುಕೊಂಡಾಗ ಸಮಯ ಬೆಳಗಿನ ಹತ್ತು ಗಂಟೆ. ಅದೊಂದು ಸರಳ ವೇದಿಕೆಯೆದುರು ಬಳಗದ ಮಿತ್ರರೆಲ್ಲ ಒಂದಾದ ಕ್ಷಣದಲ್ಲಿ, ಅಗರಬತ್ತಿಯ ಸುಗಂಧವು ವಾತಾವರಣವನ್ನೆಲ್ಲ ಆವರಿಸಿ, ಎಲ್ಲ ಮನಸುಗಳಿಗೆ ಹಬ್ಬದ ಅನುಭೂತಿ.

ಪತ್ರಿಕೆ, ಪತ್ರಿಕೆಯ ದೃಷ್ಟಿಕೋನ, ಧ್ಯೇಯಗಳು ಇಂಥ ಕೆಲವು ನಿರ್ದಿಷ್ಟ ಸಂಗತಿಗಳ ಬಗ್ಗೆ ಸಂಪಾದಕರು ಸಭೆಯೆದುರು ನಿಖರವಾಗಿ ಮಾತಾಡಿದರು. ಸಂಪಾದಕರ ಸ್ಥಾನದಲ್ಲಿ ಕುಳಿತು, ಪತ್ರಿಕೆಗಾಗಿ ಲೇಖನಗಳನ್ನು, ಕಥೆ ಕವಿತೆಗಳನ್ನು ಆಯ್ಕೆ ಮಾಡಿಕೊಳ್ಳುವಾಗ ಇರಬೇಕಾಗಿರುವ ಬದ್ಧತೆಗಳು, ಪತ್ರಿಕೆಯ ನಿಲುವನ್ನು ಕಾಯ್ದುಕೊಳ್ಳುವಲ್ಲಿನ ಜವಾಬ್ದಾರಿ. ಹೀಗೊಂದು ಮುಕ್ಕಾಲುಗಂಟೆ ಸಂಪಾದಕರ ಮಾತು. ಇದರ ನಂತರ ಬಹುನಿರೀಕ್ಷಿತವಾಗಿದ್ದ '೫೦ನೇ ಸಂಚಿಕೆ ಬಿಡುಗಡೆ ಕಾರ್ಯಕ್ರಮ' ಜರುಗಿತು. ಚೈತ್ರರಶ್ಮಿಯ ಪ್ರಪ್ರಥಮ ಸಂಚಿಕೆಯನ್ನು ಬಿಡುಗಡೆ ಮಾಡಿದ್ದ, ಶ್ರೀಯುತ ಮಹಾಬಲ ಭಟ್ಟರ ಹಸ್ತಗಳಿಂದ ಐವತ್ತನೇ ಸಂಚಿಕೆ ಕೂಡ ಲೋಕಾರ್ಪಿತವಾಯ್ತು. ಹಾಗೊಂದು ಸ್ವರ್ಣ ಸಂಭ್ರಮದ ಸಂಭವಕ್ಕೆ ತೆರೆದುಕೊಂಡ ಕ್ಷಣ ಅದು. ಇದೇ ವೇದಿಕೆಯಲ್ಲಿ, ಬಳಗದ ಕವಯಿತ್ರಿ ಶ್ರೀಮತಿ ಪ್ರಿಯಾ ಎಂ.ಭಟ್‌ರವರ ಕವನ ಸಂಕಲನ 'ಜೀವನ್ಮುಖಿ' ಕೂಡ ಲೋಕಾರ್ಪಿತವಾಯ್ತು. ಚೈತ್ರರಶ್ಮಿಯ ಪಾಲಿಗೆ ಇದು ಕೂಡ ಒಂದು ಸ್ವರ್ಣ ಕ್ಷಣ. ಸಭೆಯ ಉಪಚಾರಗಳೆಲ್ಲಾ ಮುಗಿದ ಮರುಕ್ಷಣದ್ದು ಸುಗ್ರಾಸ ಚರ್ಚೆಯ ಅವಧಿ.

ಕಾರ್ಯಕ್ರಮಕ್ಕಿಂತ ಹದಿನೈದು ದಿವಸ ಮುಂಚೆಯೇ ನಿರ್ಧರಿತವಾಗಿದ್ದ ವಿಷಯಗಳ ಚರ್ಚೆಗೆ ಅಲ್ಲಿನ ಪ್ರತಿಯೊಂದೂ ಮನಸು ಕಾತರಿಸುತ್ತಿತ್ತು. ಒಂದೇ ಮನೆಯ ಸದಸ್ಯರಂತೆ ಸುತ್ತಲೂ ಒಟ್ಟಾಗಿ ಕುಳಿತು, ವಿಚಾರ ಮುಕ್ತತೆ ಇಟ್ಟುಕೊಂಡು ಹೊರಟ ಚರ್ಚೆ ಅದು.

# ನಿಮ್ಮ ಭಾವಯಾನದ ಜೊತೆ ನಾವೂ ಇದ್ದೇವೆ



# ಒಂದು ಪತ್ರ

ಪ್ರಿಯ ರಾಮಚಂದ್ರ ಹೆಗಡೆಯವರಿಗೆ,

**ಮೊ**ದಲನೆಯದಾಗಿ ಚೈತ್ರರಶ್ಮಿಯ ೫೦ನೇ ಸಂಚಿಕೆಯನ್ನು ಯಶಸ್ವಿಯಾಗಿ ತಂದಿರುವುದಕ್ಕೆ ಅಭಿನಂದನೆಗಳು. ಚೈತ್ರರಶ್ಮಿಯ ಯಾತ್ರೆ ಅಂತರಂಗದಿಂದ ಚೆನ್ನಾಗಿ ಮೂಡಿಬಂದಿದೆ. ಸಂಪಾದಕರ ಈ ಸಂತೋಷದಲ್ಲಿ ನಿಮ್ಮ ನೂರಾರು ಓದುಗರು ಸಂಭ್ರಮಿಸಿರುತ್ತಾರೆ.

ಬರಹಗಳು ಇಷ್ಟವಾಯಿತು. ಪುಸ್ತಕ ಪರಿಚಯ, ಲೇಖನಗಳಲ್ಲಿ ಓದಿಸಿಕೊಳ್ಳುವ ಗುಣವಿದೆ. ಕನ್ನಡದಲ್ಲಿ ಸಾಕಷ್ಟು ಸಾಹಿತ್ಯಿಕ ಪತ್ರಿಕೆಗಳಿದ್ದರೂ ಅದರ ನಡುವೆ ಚೈತ್ರರಶ್ಮಿ ತನ್ನದೇ ಆದ ಹೊಸ ರಶ್ಮಿಯೊಂದನ್ನು ಮೂಡಿಸಿದೆ ಎಂದರೆ ಅತಿಶಯೋಕ್ತಿಯಲ್ಲ. ಯುವ ಬರಹಗಾರರ ಬರಹವನ್ನು ಪ್ರಕಟಿಸುವ ಮೂಲಕ ನಿಜಾರ್ಥದ ಸಾಹಿತ್ಯದ ಪರಿಚಾರಿಕೆಯನ್ನು ಚೈತ್ರರಶ್ಮಿ ಮಾಡುತ್ತಿದೆ. ಇಲ್ಲಿನ ಎಲ್ಲ ಬರಹಗಳೂ ಕೂಡ ಒಂದು ರೀತಿಯಲ್ಲಿ ನವಿರಾಗಿದೆ. ಈ ಸಂಚಿಕೆಯ ಮುಖ ಪುಟ, ಒಳಪುಟಗಳ ವಿನ್ಯಾಸ ಆಕರ್ಷಕವಾಗಿದೆ.

ಕಥೆ, ಕವನ, ಲೇಖನಗಳನ್ನು ಪ್ರಕಟಿಸಿದಂತೆ ಮುಂದಿನ ದಿನಗಳಲ್ಲಿ ಸಾಧ್ಯವಾದರೆ ಯಾವುದಾದರೂ ಒಂದು ಬಗೆಯ ವಿಮರ್ಶೆಯನ್ನೂ ಪ್ರಕಟಿಸಿ. ಅದು ಸಾಮಾಜಿಕ ವಿಮರ್ಶೆ ಅಥವಾ ಸಾಹಿತ್ಯದ ವಿಮರ್ಶೆಯೂ ಇರಬಹುದು. ನಿರ್ದಿಷ್ಟವಾದ ಕವಿತೆ, ಕಥೆಯನ್ನೂ ಸೂಚಿಸಿದರೆ ಓದುಗರೇ ಅದರ ಕುರಿತು ವಿಮರ್ಶೆಯನ್ನು ಮಾಡಬಲ್ಲರು. ಅದನ್ನು ಪ್ರಕಟಿಸಿ.

ಹಾಗೆಯೇ ಇನ್ನೊಂದು ಸಂಗತಿ, ಯಾವುದಾದರೂ ಕ್ಷೇತ್ರದಲ್ಲಿ ವಿಶೇಷ ಸಾಧನೆ ಮಾಡಿದ ಒಬ್ಬರ ಸಂದರ್ಶನವನ್ನು ಮಾಡಿ ಹಾಕಬಹುದಲ್ಲ. ಅದಕ್ಕಾಗಿ ನಿಮ್ಮ ಸ್ನೇಹಿತರ ವಲಯದಲ್ಲಿ ಅವರು ವಾಸವಾಗಿರುವ ಪ್ರದೇಶದಲ್ಲಿ ನೀವು ಗುರುತಿಸಲ್ಪಟ್ಟ ವ್ಯಕ್ತಿಯ ಸಂದರ್ಶನವನ್ನು ಮಾಡಿ ಕೊಡಬಹುದು.

ನಮ್ಮ ಅನೇಕ ಬಹಳ ಮಹತ್ವದ ಬರಹಗಾರರು ಚರ್ಚೆಗೆ ಒಳಗಾಗದೆ ಮರೆಗೆ ಸರಿಸಲ್ಪಟ್ಟಿದ್ದಾರೆ. ಅಂತಹ ನಿರ್ಲಕ್ಷಿತ ಬರಹಗಾರರ ಮತ್ತು ಅವರ ಬರವಣಿಗೆಯ ಒಂದು ಪರಿಚಯವನ್ನು ಪ್ರತಿ ಸಂಚಿಕೆಗೆ ಒಬ್ಬರಂತೆ ನೀಡಬಹುದಲ್ಲವೇ ? ಪತ್ರಿಕೆಯ ಮೊದಲ ಪುಟದಲ್ಲಿ, ಒಂದು ಕಡೆ ಇಡೀ ಸಂಚಿಕೆಯ ಪರಿವಿಡಿಯನ್ನು ಪ್ರಕಟಿಸಿದರೆ ಚಂದವಲ್ಲವೆ?

ಮುಂದಿನ ದಿನಗಳಲ್ಲಿ ಇನ್ನಷ್ಟು ಚೆನ್ನಾಗಿ ಪರಿಪುಷ್ಟ ಸಂಚಿಕೆಗಳು ನಿಮ್ಮಿಂದ ಬರಲಿ ಎಂಬ ಆಶಯ ನನ್ನದು. ಚೈತ್ರರಶ್ಮಿಯ ಕುರಿತು ತುಂಬಾ ನಿರೀಕ್ಷೆ ಇಟ್ಟುಕೊಂಡ ಓದುಗರು ನಾವು ನಿಮ್ಮ ಜೊತೆ ಇದ್ದೇವೆ.

ವಂದನೆಗಳೊಂದಿಗೆ,

**– ರೋಹಿಣಾಕ್ಷ ಶಿರ್ಲಾಲು,**
ಉಪನ್ಯಾಸಕರು, ವಿವೇಕಾನಂದ ಕಾಲೇಜು
ಪುತ್ತೂರು, ದ.ಕ.







**ಇಷ್ಟೆಲ್ಲ ಸಾಹಿತ್ಯ, ಕಲೆ, ಕುಣಿತ, ಸಂಘಟನೆ, ವೈದ್ಯ, ಅಭಿಯಂತರ, ವಿಮಾನ ಚಾಲಕ, ಆರ್ಥಿಕ ತಜ್ಞ, ಷೇರು ಹೂಡಿಕೆದಾರ, ಬಂಡವಾಳ ತಜ್ಞ, ಕಾಫಿ ಕೆಫೆ ಮಾಲೀಕ, ವ್ಯಾಪಾರ, ವಹಿವಾಟುದಾರ, ನೃತ್ಯಗಾತಿ, ಗಾಯಕಿ, ಗಣಿತಜ್ಞ ಹೀಗೆ ಇತ್ಯಾದಿ ಎಲ್ಲ ಭ್ರಮಾಧೀನ ಸುಖಸಂಪದಗಳ ಬಗ್ಗೆ ಗೌರವ ಡಾಕ್ಟರೇಟ್ ತೆಗೆದುಕೊಳ್ಳುವಷ್ಟು ಕೊಬ್ಬುವ ನಾವು, ಅಸಲಿಗೆ ತಿನ್ನುವ ಅನ್ನ ಬಂದ ಮೂಲದತ್ತ ಅರೆ ಘಳಿಗೆ ಯೋಚಿಸಿದ್ದೇವಾ ? ಮೈ ಬಗ್ಗಿಸಿ ದುಡಿಯುತ್ತಲೇ ಹಲವೆಂಟು ಮಾನಸಿಕ ಒತ್ತಡಗಳಿಗೆ ಈಡಾಗುತ್ತಲೇ ರಕ್ತವನ್ನು ಬೆವರಾಗಿ ಗುತ್ತುವ, ಬಸಿಯುವ 'ಮಣ್‌ಮಗನನ್ನು ಎಂದಾದರೂ ವಿದೇಶಾಂಗ ಸಚಿವನಷ್ಟೇ ನೀನು ಮೇಲ್ಮಟ್ಟದವ ಅಂದಿದ್ದೀವಾ?**

ಸಹಜವೂ, ಸತ್ವವುಳ್ಳದ್ದೂ, ಘಮ ಮತ್ತು ಬಣ್ಣ ಉಳ್ಳದ್ದೂ ಹರಳು ಗಟ್ಟಿದ್ದೂ ಆಗಿರುತ್ತದೆ. ರೈತ ೧೫೦ ಕ್ಕೆ ಕೇಳಿದರೂ ನಮ್ಮದು ಚೌಕಾಸಿಬುದ್ಧಿ ೧೧೦ ಕ್ಕೆ ಕೇಳುತ್ತದೆ. ಹಾಗಾದರೆ ರೈತ ಮಹಿಳೆಯರ ಅಸಂಘಟಿತ ಕುಸುರಿ, ನೈಪುಣ್ಯ, ಶ್ರಮ, ಶ್ರದ್ಧೆ ಸಾಂಪ್ರದಾಯದ ಶುದ್ಧ ಸೊಗಡಿಗೆ ಕಿಂಚಿತ್ತೂ, ರವದಷ್ಟೂ ಬೆಲೆ ದರ ಕರಿ'ಕೆಯೇ ಇಲ್ಲವಾ?!

ನಾವ್ಯಾಕೆ ಮಣ್ಣು ಮರೆತ ಬಣ್ಣಗೇಡಿಗಳಾಗಿದ್ದೇವೆ? ಬದುಕನ್ನು ಒಂದು 'ಫ್ಯಾಶನ್' ಎಂಬಂತೆ ಬದುಕಬೇಕು ಎಂಬ ಭರದಲ್ಲಿ ನಿಂತ ನೆಲ ಒದೆಯುವ, ತಾಯಿ ಎದೆ ಬಗೆಯುವ ಭಂಡತನವೇಕೆ? ಗಣಕಯಂತ್ರದ ಚಿಪ್ಪನ್ನೋ, ಮೌಸನ್ನೋ, ಸೂಕ್ಷ್ಮ ತಂತ್ರಾಂಶಗಳನ್ನು ಮುರಿದು ತಿನ್ನಲಾದೀತಾ, ತಿಂದು ಹೊಟ್ಟೆ ತಣಿಸಲಾದೀತಾ? ಬೇಕು, ಸಾಫ್ಟ್‌ವೇರ್, ಹಾರ್ಡ್‌ವೇರ್ಸ್, ಇಂಡಸ್ಟ್ರಿ, ಉಪಗ್ರಹ ಎಲ್ಲ ಬದುಕಿಗೆ ಬೇಕು. ಹಾಗಂತ ಅವ್ಯಾವೂ ಹೊತ್ತಿನ ತುತ್ತಿನ ಚೀಲದ ಅಗ್ನಿಯನ್ನು ತಣ್ಣಗಾಗಿಸುವ ರೈತಾಪಿಗಿಂತ ದೊಡ್ಡದಲ್ಲ. ಅವೆಲ್ಲ ಇಲ್ಲದಿದ್ದರೂ ಬದುಕಲಾದೀತೆಂಬ ಭರವಸೆಯಿದೆ. ಆದರೆ ಎರಡು ಹೊತ್ತು ಬೇಡ ಒಂದು ಹೊತ್ತು ಊಟವಿಲ್ಲದೇ ಬದುಕಲಾದೀತೆಂದು ಎದೆತಟ್ಟಿ ಹೇಳಿಕೊಳ್ಳಲಿಕ್ಕೆ ನಮ್ಮಿಂದಾಗುವುದಿಲ್ಲ. ಅದಕ್ಕೆ ಮಹಾಚೇತನ ಲಾಲ್‌ಬಹಾದ್ದೂರ್ ಶಾಸ್ತ್ರೀಜಿಯವರು 'ಜೈಜವಾನ್ ಜೈಕಿಸಾನ್' ಎಂದದ್ದು. ಒಬ್ಬ ಬುಡ ಮಾಡುವವ ಇನ್ನೊಬ್ಬ ತಲೆ ಕಾಯುವವ ಎಂಬ ಗೌರವದಿಂದ ಒಬ್ಬ ದೇಶಕ್ಕಾಗಿ ನೆತ್ತರು ಬಸಿಯುವವ, ಇನ್ನೊಬ್ಬ ಬೆವರು ಬಸಿಯುವವ ಎಂಬ ಪೂಜ್ಯತೆಯಿಂದ ಇಂದಿನ ಪೀಳಿಗೆಯಾದ ನಮಗೆ ನೆಲ ಉತ್ತಿ ಬಿತ್ತುವವನೂ ಬೇಡ, ರಕ್ತ ಹನಿಸಿ ತಲೆಕಾಯುವವನೂ ಬೇಡ. ನೆನಪಿರಲಿ ಈ ದೇಶದಲ್ಲಿ ನೆಲ ಉತ್ತುತ್ತಿರುವವರು ಮಧ್ಯಮವರ್ಗ ಮತ್ತು ಅದಕ್ಕಿಂತ ಬಡವರು ದೇಶ ಕಾಯುವವರೂ ಅಂಥವರೇ. ದುಡ್ಡಿದ್ದವನು ಎಂದೂ ನೆಲಮೂಲದ ಬಗ್ಗೆ ಗಾಢವಾಗಿ ಯೋಚಿಸಿದ್ದು ವಿರಳ.

ಇನ್ನೂ ಬಹುಕಾಲ ಈ ದೇಶದ ಮಣ್ಣಿನ ಮಗ ಏನಯ್ಯ ಬೋರ, ಅನ್ನಿಸಿಕೊಂಡಿರಲಾರ. ಯಾವುದೇ ಒಂದು ವ್ಯಕ್ತಿ ಕ್ಷೇತ್ರ ನಿರಂತರ ಅವಗಣನೆ, ಅವಮಾನ, ಆರ್ಥಿಕ ದೌರ್ಬಲ್ಯಕ್ಕೆ ತುತ್ತಾಗುತ್ತಿದ್ದರೆ ಒಂದು ದಿನ ಅದು ಪ್ರತಿಭಟನೆ ಕ್ರಾಂತಿಯತ್ತ ಮುಖ ಮಾಡುತ್ತದೆ. ಹಾಗಾಗ ಕೂಡದು. ಪೂಜ್ಯಭಾವದಿಂದ ಯುವಪೀಳಿಗೆ ವಿಶ್ವ ಆರ್ಥಿಕ ಹಿಂಜರಿತದ ನೆಪದಲ್ಲಾದರೂ "ಮರಳಿ ಮಣ್ಣಿನತ್ತ ಚಿತ್ತಹರಿಸುವುದರತ್ತ" ಗಮನಿಸಿದರೆ, ನಮಗೂ ಒಳಿತು ನಾಡಿಗೂ ಒಳಿತು.

ಕಥಾರಶ್ಮಿ



# ಓಡಿ ಹೋದವನು

ವಿನುತಾ ಹೆಗಡೆ, ಯಲ್ಲಾಪುರ

ಬಸ್ಸು ನಿಧಾನಕ್ಕೆ ಚಲಿಸುತ್ತಿತ್ತು. ಅದೇ ಹೊಂಡಗುಂಡಿಗಳ ಸಿರಸಿಯಿಂದ ಯಲ್ಲಾಪುರವರೆಗಿನ ರಸ್ತೆ. ಈ ರಸ್ತೆಯ ಬದಿಯಲ್ಲಿ ಕನಿಷ್ಠ ಒಂದು ಬಸ್ಸಾದರೂ ಹಾಳಾಗಿ ನಿಲ್ಲುತ್ತದೆ. ಅದು ಸರಿಯಾಗಿ ಚಲಿಸುವ ಹೊತ್ತಿಗೆ ಒಂದು ದಿನವಾದರೂ ಆಗಬಹುದು, ಹೇಳಲಾಗದು. ಬ್ರಿಟೀಷ್ ಕಾಲದ ಸೇತುವೆಯಂತೂ ಭಯ ಹುಟ್ಟಿಸುವಂತಿತ್ತು. ಅದರ ಜೀರ್ಣೋದ್ಧಾರ ಯಾವಾಗಲೋ ಗೊತ್ತಿಲ್ಲ. ಇದು ಯಲ್ಲಾಪುರ ಮತ್ತು ಮಂಚೀಕೇರಿಯನ್ನು ಸೇರಿಸುವ ಬೇಡ್ತಿ ಸೇತುವೆ.

'ಡಬ್ ಡಬ್' ಸಪ್ಪಳಕ್ಕೆ ಬಸ್ಸಲ್ಲಿ ಕುಳಿತಿದ್ದ ಎಲ್ಲರೂ ಮುಖ ಮುಖ ನೋಡಿಕೊಂಡರು. ಯಾರೋ ಹೇಳಿದರು 'ಕೆಳಗಿಳಿಯಬೇಕಂತೆ'. ಡ್ರೈವರ್ ಕೂಡ ಕೆಳಗಿಳಿಯುತ್ತಿದ್ದ. ಕೈಯಲ್ಲಿದ್ದ ಚೀಲದೊಂದಿಗೆ ಕೆಳಗಿಳಿದು ನೋಡಿದರೆ ಬಸ್ಸಿನ ಟಯರ್ ಪಂಕ್ಚರ್ ಆಗಿತ್ತು. ಅರ್ಧಗಂಟೆಯ ನಂತರ ಅದೇ ಅಲುಗಾಟದೊಂದಿಗೆ ಬಸ್ಸು ಹೊರಟಿತು.

ತನ್ನೂರು ಬಯಲು ಸೀಮೆ ತಲುಪುವುದು ರಾತ್ರಿಯೇ ಇರಬೇಕು ಎಂದುಕೊಂಡ. ಕಣ್ಣನ್ನು ಮುಚ್ಚಲೂ ಭಯ. ಊರಿಂದ ಹೋದಮೇಲೆ ಬರುತ್ತಿರುವುದು ಇದೇ ಮೊದಲ ಬಾರಿ. ಊರುಬಿಟ್ಟು ಹೋದಮೇಲೆ ಎಲ್ಲಿದ್ದೇನೆ, ಹೇಗಿದ್ದೇನೆ, ನೀವು ಹೇಗಿದ್ದೀರಿ ಎಂದು ಯಾವುದರ ಮೂಲಕವೂ ಮನೆಯವರನ್ನು ಸಂಪರ್ಕಿಸಿಲ್ಲ. ಅಮ್ಮ, ಅಪ್ಪ ಏನೆಂದುಕೊಂಡಿರಬಹುದು. "ಮಗ ಓಡಿಹೋಗಿದ್ದಾನೆ" ಅವನು ದುಡಿಯಲು ಬಾರದ ಆಲಸಿ ಮಗ ಎಂದುಕೊಂಡಿರಬಹುದೋ ..? ಅಥವಾ ..?

ಬಯಲು ಸೀಮೆಯ ಆ ಒಂದು ಎಕರೆ ಗದ್ದೆಯಲ್ಲಿ ಏನು ತಾನೇ ಬೆಳೆಯಲು ಸಾಧ್ಯ. ಬೇಸಿಗೆಯ ಬಿಸಿಲಿಗೆ ಗದ್ದೆಯೆಲ್ಲ ನೀರಿಲ್ಲದೇ ಬಾಯ್ತೆರೆದು ನಿಲ್ಲುತ್ತದೆ. ಗದ್ದೆಯ ಮೇಲೆ ಮಾಡಿದ್ದ ಸಾಲ ಆ ಗದ್ದೆ ಮಾರಿದರೂ ತೀರದು. ಒಂದು ಹೊತ್ತಿಗೆ ಊಟಕ್ಕೂ ಬಾರದ ಆ ಗದ್ದೆಯಲ್ಲಿ ದುಡಿಯುವುದು ಏನನ್ನು ? ಎಲ್ಲಾದರೂ ಹೊರಗಡೆ ಕೆಲಸಕ್ಕೆ ಸೇರುತ್ತೇನೆಂದರೆ, ಬೇಡ ಇದ್ದುದರಲ್ಲಿಯೇ ಮಾಡೋಣ ಎಂದು ಹೇಳುವ ಅಪ್ಪ. ಕಣ್ಣಮುಂದೆಯೇ ಇರು ಮಗನೆ ಎನ್ನುವ ತಾಯಿ.

ಹತ್ತನೇ ತರಗತಿಯಿಂದ ಮುಂದೆ ಓದಿಸಲಿಕ್ಕೂ ದುಡ್ಡಿಲ್ಲದಿರುವ ಈ ಸ್ಥಿತಿಯಲ್ಲಿ ಇಲ್ಲಿಯೇ ಕೆಲಸ ಮಾಡೋಣವೆಂದರೆ ನೀರಿಲ್ಲದ ಭೂಮಿ. ಬಯಲು ಸೀಮೆಯ ಜನರ ಪಾಡೇ ಇಷ್ಟು, ಬೇಸಿಗೆ ಬಂತೆಂದರೆ ಸಾಲದ್ದೇ ಊಟ. ಮಳೆಗಾಲದಲ್ಲಿ

*ಅವನು ತಾನು ಬದಲಾಗಿದ್ದೇನೆಯೇ ನೋಡಿಕೊಂಡ. ಹೌದು ನಾನು ನಿಜವಾಗಿಯೇ ಬದಲಾಗಿದ್ದೇನೆ. ಹೋಗಬೇಕಾದರೆ ಚಡ್ಡಿ ಹಾಕಿದ್ದೆ ಅದು ಈಗ ಯಾವುದೋ ಮೂಲೆ ಸೇರಿದೆ. ಗರಿ ಗರಿಯಾದ ಬಿಳಿಮುಂಡ ಉಟ್ಟಿದ್ದೇನೆ. ಬಿಳಿಯ ಷರ್ಟ್ ಅದೇ ಅಲ್ಲಿನ ಶಿಸ್ತು. ಸ್ವಲ್ಪ ಮಟ್ಟಿಗೆ ಉಂಡು ತಿಂದು ಮಲೆನಾಡಿನ ಹುಡುಗರಂತೆ ಗುಂಡಾಗಿದ್ದೇನೆ. ಬಯಲು ಸೀಮೆಯ ಹುಡುಗರಂತೆ ಕರಿಯ ಕೋಲಿನಂತೆ ಕಾಣುವುದಿಲ್ಲ. ಈಗ ಅಲ್ಲಿನ ತಿಳಿಸಾರು ಅನ್ನ ಸೇರುವುದಿಲ್ಲವೇನೋ. ಅವನಷ್ಟಕ್ಕೆ ಅವನಿಗೆ ನಗು.*





ಸರಿಯಾಗಿ ಬೆಳೆ ಬಂದರೆ ಬಂತು ಅಷ್ಟೇ. ಎರಡು ವರ್ಷಗಳ ಹಿಂದೆ ಯಾರಿಗೂ ಹೇಳದೆಯೇ ಯಲ್ಲಾಪುರದ ಬಸ್ಸು ಹತ್ತಿ ಬಂದಿದ್ದ ಶ್ರೀಧರ ಮುಂಡಗೋಡದಿಂದ ಯಲ್ಲಾಪುರ ಬರುವವರೆಗೂ ಯೋಚಿಸುತ್ತಲೇ ಬಂದಿದ್ದ, ಮುಂದೇನು...? ಮುಂದೇನು...?

ಯಲ್ಲಾಪುರ ಬಸ್‌ಸ್ಟಾಂಡಿನಲ್ಲಿ ಸಿರಸಿಗೆ ಹೋಗುವ ಬಸ್ಸು ಸಿದ್ಧವಾಗಿತ್ತು. ಆಗ ಥಟ್ಟನೆ ನೆನಪಾಗಿದ್ದು ಸೋಂದಾ ಮಠ. ಅಲ್ಲಿ ಬಂದವರಿಗೆ ಊಟ ಹಾಕುತ್ತಾರೆ ಮಲಗಲು ಸ್ಥಳ ಕೊಡುತ್ತಾರೆ. ಎರಡೇ ದಿನ ಉಳಿದ ನಂತರ, ನೀನು ಯಾರು ಏನು, ಎಂದೆಲ್ಲಾ ಪ್ರಶ್ನಿಸಿ ನಂತರ ಕೆಲಸ ಮಾಡುವುದಾದರೆ ಅಲ್ಲಿಯೇ ಕೆಲಸ ಕೊಡುತ್ತಾರೆ ಎಂದು ಅವನ ಸಹಪಾಠಿ ಶಂಕರ ಹೇಳಿದ ನೆನಪು. ಯಲ್ಲಾಪುರದಿಂದ ಸಿರಸಿಗೆ ಹೋಗಲು ಪ್ರತಿ ಘಂಟೆಗೊಂದು ಬಸ್ಸಿದೆ ಆದರೂ ಸೀಟಿಗಾಗಿ ಪರದಾಡಬೇಕು. ಈ ಯಲ್ಲಾಪುರ ಬಯಲು ಸೀಮೆಯಿಂದ ಸ್ವಲ್ಪ ದೂರ. ಇಲ್ಲಿ ಮಳೆ, ಬೆಳೆಯೆಲ್ಲ ಸಾಮಾನ್ಯವಾಗಿ ಚೆನ್ನಾಗಿಯೇ ಆಗುತ್ತದೆ.

ಯಲ್ಲಾಪುರದಿಂದ ಐವತ್ತು ಕಿ.ಮೀ. ಸಿರಸಿಗೆ ಇಲ್ಲಿಂದ ಮೂವತ್ತು ಕಿ.ಮೀ. ಕ್ರಮಿಸಿದರೆ ಸಿಗುವುದೇ ಸೋಂದಾ ಕ್ರಾಸ್. ಇಲ್ಲಿ ಇಳಿದು ಬಾಡಿಗೆ ಬೈಕ್ ಮಾಡಿಕೊಂಡು ಸೋಂದಾ ಮಠಕ್ಕೆ ಹೋಗಬಹುದು. ಇಲ್ಲಿ ಸಿರಸಿಯ ಸುತ್ತ ಮುತ್ತಲಿನ ಜನರೇ ಹೆಚ್ಚು ಹೊರಗಿನಿಂದ ಬಂದವರೂ ಇದ್ದಾರೆ ಆದರೆ ಬಹಳ ಕಡಿಮೆ. ಮಠಕ್ಕೆ ಹೋದ ಒಂದೇ ದಿನದಲ್ಲಿ ತನ್ನ ಕೆಲಸದ ಬಗ್ಗೆ ವಿಚಾರ ಮಾಡಿ ಗುರುಗಳಿಗೆ ತಿಳಿಸಿದ. ಬಯಲು ಸೀಮೆಯ ಜನರಿಗೆ ಸಂಕೋಚ ಕಡಿಮೆ ಅವರು ನೇರವಾಗಿಯೇ ಮಾತನಾಡುವ ಜನ, ಅವನು ಯಾವ ಸಂಕೋಚವೂ ಇಲ್ಲದೇ ಇರುವ ವಿಷಯ ತಿಳಿಸಿ ಕೆಲಸ ಗಿಟ್ಟಿಸಿಕೊಂಡ.

ಬಸ್ಸು ಯಲ್ಲಾಪುರ ನಿಲ್ದಾಣವನ್ನು ಪ್ರವೇಶಿಸಿತು. ಎರಡು ವರುಷದ ಹಿಂದೆ ಯಲ್ಲಾಪುರ ಹೇಗಿತ್ತೋ ಈಗಲೂ ಹಾಗೆ ಇದೆ. ಅಂಬೇಡ್ಕರ್ ವೃತ್ತ ಒಂದನ್ನು ಬಿಟ್ಟು. ಅದೇ ಪಂಚೆ ಉಟ್ಟ ಹಳ್ಳಿಯ ಜನರು, ಬಾಯಲ್ಲಿ ಅಗಿಯುವ ಎಲೆ, ಅಡಿಕೆ, ಅಲ್ಲಿ ಇಲ್ಲಿ ಗಾಡಿಯ ಮೇಲೆ 'ಬುರ' ಎಂದು ಓಡಾಡುವ ಹುಡುಗರು, ಮಧ್ಯವಯಸ್ಕರು, ಅಲ್ಲಲ್ಲಿ 'ಪಿಚಕ್' ಎಂದು ಸ್ಪಾರ್ ಗುಟಕಾ ತುಪ್ಪುವ ಪೇಟೆಯ ಜನ ತಾವು ಸ್ಪಾರ್, ಗುಟಕಾ ತಿನ್ನದಿದ್ದರೆ ಅಡಿಕೆಗೆ ಬೆಲೆ ಬರುವುದಿಲ್ಲ ಎಂದುಕೊಂಡ, ಏನೆನ್ನಬೇಕೋ ಎಂದು ತಿಳಿಯದ ಜನರು.

ಅವನು ತಾನು ಬದಲಾಗಿದ್ದೇನೆಯೇ ನೋಡಿ ಕೊಂಡ. ಹೌದು ನಾನು ನಿಜವಾಗಿಯೇ ಬದಲಾಗಿದ್ದೇನೆ. ಹೋಗಬೇಕಾದರೆ ಚಡ್ಡಿ ಹಾಕಿದ್ದೆ ಅದು ಈಗ ಯಾವುದೋ ಮೂಲೆ ಸೇರಿದೆ. ಗರಿ ಗರಿಯಾದ ಬಿಳಿಮುಂಡ ಉಟ್ಟಿದ್ದೇನೆ. ಬಿಳಿಯ ಷರ್ಟ್ ಅದೇ ಅಲ್ಲಿನ ಶಿಸ್ತು. ಸ್ವಲ್ಪ ಮಟ್ಟಿಗೆ ಉಂಡು ತಿಂದು ಮಲೆನಾಡಿನ ಹುಡುಗರಂತೆ ಗುಂಡಾಗಿದ್ದೇನೆ. ಬಯಲು ಸೀಮೆಯ ಹುಡುಗರಂತೆ ಕರಿಯ ಕೋಲಿನಂತೆ ಕಾಣುವುದಿಲ್ಲ. ಈಗ ಅಲ್ಲಿನ ತಿಳಿಸಾರು ಅನ್ನ ಸೇರುವುದಿಲ್ಲವೇನೋ. ಅವನಷ್ಟಕ್ಕೆ ಅವನಿಗೆ ನಗು.

“ಶ್ರೀಧ'ರ ಯಾವಾಗ ಬಂದ್ಯಪ್ಪಾ?” ಮುಂಡಗೋಡ ಬಸ್ಸು ಹತ್ತಿಕುಳಿತಿದ್ದ ಶ್ರೀಧರ ಧ್ವನಿಬಂದತ್ತ ತಿರುಗಿ ನೋಡಿದ. ಅಲ್ಲಿ ಅವನ ಮಾವ ನಿಂತಿದ್ದ. “ಏನೋ ನಿನ್ನ ಗುರುತೇ ಸಿಗವಲ್ದು” ಎಂದ. ಅವರು ಶ್ರೀಧರನ ತಾಯಿಯ ಅಣ್ಣ. ಅವರದೂ ಬಡತನದ ಜೀವನ. “ಮಾವಾ ನೀವು”? ಎಂದ ಶ್ರೀಧರ. “ನಿನಗೆ ವಿಷಯ ಗೊತ್ತಿಲ್ವೇ” ಎಂದು ಶ್ರೀಧರನ ಮಾವ ಕೇಳಿದ. ಅವರ ಧ್ವನಿಯಲ್ಲಿ ದುಃಖವಿತ್ತು. “ಮಾವ ಏನಾಯಿತು ಏನ್ ವಿಷಯ” “ನೀನು ವಿಷಯ ತಿಳಿದೇ ಬಂದೆ ಅಂದುಕೊಂಡೆ, ಮಗನೆ ಹಂಗೆಲ್ಲ ಆಗಬಾರದಿತ್ತು. ನೀನು ಮನಸ್ಸನ್ನು ಸ್ವಲ್ಪ ಗಟ್ಟಿಮಾಡಿಕೋ” ಎಂದ ಅವರ ಧ್ವನಿಯಲ್ಲಿ ನಡುಕವಿತ್ತು. “ಯಾಕೆ ಮಾಮ ಅಮ್ಮ ಅಪ್ಪಯೆಲ್ಲ ಚೆನ್ನಾಗಿದ್ದಾರೆ ತಾನೇ, ನೀನು ಹೋಗಿದ್ಯಾ”, “ನೀನು ಮನೆಬಿಟ್ಟ ಹೋದಮೇಲೆ ಅವರು ತಾನೆ ಏನು ಮಾಡತಾರೆ ಪಾಪ ವಯಸ್ಸು ಬೇರೆ ಆಗಿತ್ತು. ನೀನು ಮಾಡಿದ್ದು ಸರಿಯಲ್ಲ. ಅವರು ಸಾಲ ಮಾಡಿದ್ದು ಬಹಳವಾಗಿ ನಿನ್ನೆ ರಾತ್ರಿ ಆತ್ಮಹತ್ಯೆ ಮಾಡಿಕೊಂಡಿದ್ದಾರಂತೆ. ನಾನು ಅದಕ್ಕಾಗಿ ಅಲ್ಲಿಗೇ ಹೊರಟಿದ್ದೀನಿ” ಮಾವನ ಮಾತು ಕೇಳುತ್ತಿದ್ದಂತೆ ಶ್ರೀಧರನ ಕಣ್ಣಿಗೆ ಕತ್ತಲಿಟ್ಟಂತಾಯಿತು. ತಾನು ಅವರಿಂದ ದೂರ ಹೋಗಿ ಸಾಧಿಸಿದ್ದಾದರೂ ಏನು? ಅಪ್ಪನ ಸಾಲ ತೀರಿಸಿ.........ಕೈಯಲ್ಲಿ ಹಿಡಿದುಕೊಂಡಿದ್ದ ಹಣದ ಚೀಲ ಅವನನ್ನು ನೋಡಿ ನಕ್ಕಂತಾಯಿತು. ಶ್ರೀಧರ ಕುಳಿತಲ್ಲೇ ಇನ್ನೂ ಕುಸಿದು ಕುಳಿತ.